ಸಂಪುಟ: 14 Volume | ಸಂಚಿಕೆ: 23 Issue | ಪುಟಗಳು 08 Pages | ಸೋಮವಾರ 27 ಏಪ್ರಿಲ್ 2026 | ₹4 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**
ಪ್ರೀತಿಯಿಂದಾಡಿದ ಪ್ರತಿಯೊಂದು ನುಡಿಯು ಸಿಡಿಲಿನಂತೆ ಪರಿಣಾಮಕಾರಿ.
–ಸ್ವಾಮಿ ವಿವೇಕಾನಂದ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

ದಸಾಪ ವಿಭಾಗೀಯ ಸಂಯೋಜಕರಾಗಿ ಹೆಚ್.ಎಫ್.ಮಸ್ಕಿ 6
ಪಶು ಔಷಧಿ ವಿಕ್ರಯ ಕೇಂದ್ರ ಸ್ಥಾಪನೆಗೆ ಅರ್ಜಿ 7
ಅಮಾಯಕರ ಮೇಲೆ ಪೋಲೀಸ್ ಶೌರ್ಯ..? 8



ಶ್ವಾಸಕೋಶ ಸೋಂಕಿನಿಂದ ಸಚಿವ ಡಿ. ಸುಧಾಕರ್ ಅವರು ಚಿಕಿತ್ಸೆ ಪಡೆಯುತ್ತಿರುವ ಬೆಂಗಳೂರು ಎಲೆಕ್ಟ್ರಾನಿಕ್ ಸಿಟಿಯ ಏಖಔಖ ಆಸ್ಪತ್ರೆಗೆ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಭಾನುವಾರ ಭೇಟಿ ನೀಡಿ, ಅವರ ಆರೋಗ್ಯ ಸ್ಥಿತಿ ಕುರಿತು ವೈದ್ಯರ ತಂಡ ಹಾಗೂ ಕುಟುಂಬ ಸದಸ್ಯರ ಜತೆ ಸಮಾಲೋಚನೆ ನಡೆಸಿದರು. ಶಾಸಕ ರಘುಮೂರ್ತಿ ಉಪಸ್ಥಿತರಿದ್ದರು.

## ಸಂಗ್ರಹಿಸಿದ್ದ 150 ಟನ್ ಅಕ್ಕಿ ಸೀಜ್

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಕೊಪ್ಪಳ ತಾಲೂಕಿನ ಕೂಕನಪಳ್ಳಿ ಸಮೀಪದ ಜಮೀನಿನಲ್ಲಿದ್ದ ದಾಸ್ತಾನಿರಿಸಿದ್ದ 150 ಟನ್ ಗೂ ಅಧಿಕ ಅನ್ನಭಾಗ್ಯ ಅಕ್ಕಿ ಸೀಜ್ ಮಾಡಲಾಗಿದೆ. ಬಡವರ ಹೊಟ್ಟೆ ಸೇರಬೇಕಿದ್ದ ಅನ್ನಭಾಗ್ಯ ಅಕ್ಕಿಗೆ ಕನ್ನ ಹಾಕಿರೋ ಖದೀಮರು ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿರೋ ಪೊಲೀಸರು ಹಾಗೂ ಆಹಾರ ಇಲಾಖೆ ಅಧಿಕಾರಿಗಳು, ಸ್ಥಳದಲ್ಲಿ ಬೀಡು ಬಿಟ್ಟಿರುವ ಡಿಎಆರ್ ಪೊಲೀಸರು 1 ಸಾವಿರಕ್ಕೂ ಅಧಿಕ ಅಕ್ಕಿ ಮೂಟೆಗಳು ಪತ್ತೆಹಚ್ಚಿದ್ದಾರೆ. ಗ್ರಾಮೀಣ ಭಾಗದಿಂದ ಅನ್ನಭಾಗ್ಯ ಅಕ್ಕಿಸಂಗ್ರಹಿಸಿ ದಾಸ್ತಾನು ಮಾಡಿರುವ ಖದಿಮರ ವಿರುದ್ಧ ಅಧಿಕಾರಿಗಳು ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿದ್ದಾರೆ.





## ಮಾಜಿ ಸಿಎಂ ಬಿಎಸ್‌ವೈ ಅಭಿಮಾನೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಚಿತ್ರದುರ್ಗ

ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರ 50 ವರ್ಷಗಳ ರಾಜಕೀಯ ಜೀವನವನ್ನು ಗೌರವಿಸುವುದಕ್ಕೆ ಮೇ 9 ರಂದು ಚಿತ್ರದುರ್ಗದಲ್ಲಿ 'ಯಡಿಯೂರಪ್ಪ ಅಭಿಮಾನೋತ್ಸವ' ಕಾರ್ಯಕ್ರಮದ ನಡೆಯಲಿದೆ. ಇದರ ಪ್ರಯುಕ್ತ ಭೂಮಿಪೂಜಾ ಕಾರ್ಯಕ್ರಮದ ಧ್ವಜಾರೋಹಣವನ್ನು ಚಿತ್ರದುರ್ಗದ ಮಾದಾರ ಚೆನ್ನಯ್ಯ ಗುರು ಪೀಠದ ಪರಮಪೂಜ್ಯ ಬಸವಮೂರ್ತಿ ಮಾದರ ಚೆನ್ನಯ್ಯ ಸ್ವಾಮೀಜಿಗಳು ನೆರವೇರಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್. ಅಶೋಕ್, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು,



ವಿವಿಧ ಮಠಗಳ ಪರಮಪೂಜ್ಯ ಸ್ವಾಮೀಜಿಗಳ ಸಮ್ಮುಖದಲ್ಲಿ ಭೂಮಿ ಪೂಜೆ ನೆರವೇರಿದೆ.

ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ್, ಎ.ನಾರಾ ಯಣಸ್ವಾಮಿ ಇತರರು ಉಪಸ್ಥಿತರಿದ್ದರು.

## ಕಾನೂನು ಹೋರಾಟ: ಚೇತನ್

**ಬೆಂಗಳೂರು:** ಡಾ.ರಾಜ್ ಕುಮಾರ್ ಸ್ಮಾರಕದ ಭೂಮಿಗೆ ಸರ್ಕಾರದಿಂದ ಎರಡೂವರೆ ಎಕರೆ ಪ್ರದೇಶ ನೀಡಿದ್ದನ್ನು ಪ್ರಶ್ನಿಸಿ ನಟ ಅಹಿಂಸಾ ಚೇತನ್ ಮಾಡಿದ್ದ ಪೋಸ್ಟ್ ಭಾರೀ ವಿವಾದ ಉಂಟಾಗಿತ್ತು. ಇದಕ್ಕೆ ಸಾ ರಾ ಗೋವಿಂದ್ ನೇತೃತ್ವದಲ್ಲಿ ಕನ್ನಡಪರ ಹೋರಾಟಗಾರರು ನಿನ್ನೆ ಚೇತನ್ ಅಹಿಂಸಾ ಮನೆ ಮುಂದೆ ಬಂದು ಆಕ್ರೋಶ ವ್ಯಕ್ತಪಡಿಸಿ ಕ್ಷಮೆ ಕೇಳುವಂತೆ ಆಗ್ರಹಿಸಿದ್ದರು. ಚೇತನ್ ಈ ಬಗ್ಗೆ ಕ್ಷಮೆ ಕೂಡ ಕೇಳಿದ್ದರು. ಇಂದು ಸುದ್ದಿಗೋಷ್ಠಿ ನಡೆಸಿ ಮತ್ತೆ ಕನ್ನಡಪರ ಹೋರಾಟಗಾರರ ನಡೆಯನ್ನು ವಿರೋಧಿಸಿ ಅಗತ್ಯಬಿದ್ದರೆ ಕಾನೂನು ಹೋರಾಟ ಮಾಡುವುದಾಗಿ ಹೇಳಿದ್ದಾರೆ.

## ದೇವಿಯ ಉಡಿ ತುಂಬುವ ಕಾರ್ಯಕ್ರಮ



**ಹಗರಿಬೊಮ್ಮನಹಳ್ಳಿ:** ಪಟ್ಟಣದ ದೇವತೆ ಯಾದ ಶ್ರೀ ಗಾಳೆಮ್ಮ ದೇವಿ ಯ ಉಡಿ ತುಂಬುವ ಕಾರ್ಯಕ್ರಮ ವನ್ನು ಹಮ್ಮಿ ಕೊಳ್ಳಲಾಗಿದ್ದು ದಿನಾಂಕ 04–05–2026 ಸೋಮವಾರ ಬೆಳಿಗ್ಗೆ 9–00 ಕ್ಕೆ ಹಂದರ ಪೂಜೆ. 05–05–2026 ಮಂಗಳವಾರ ಬೆಳಿಗ್ಗೆ 10–30 ಕ್ಕೆ ಶ್ರೀ ದೇವಿಗೆ ಪಂಚಾಮೃತ ಅಭಿಷೇಕ ಹಾಗೂ ಉಡಿ ತುಂಬುವುದು, ಹಾಗೂ ಮಹಾ ಮಂಗಳಾರುತಿ ಕಾರ್ಯಕ್ರಮ ಇರುತ್ತದೆ. ಸಕಲ ಭಕ್ತಾದಿ ಗಳು ತನು ಮನ ಧನ ಸಹಕಾರ ದೊಂದಿಗೆ ಭಾಗವಹಿಸಿ ಶ್ರೀ ದೇವಿಯ ಕೃಪೆಗೆ ಪಾತ್ರ ರಾಗಿ ಎಂದು ಶ್ರೀ ಗಾಳೆಮ್ಮಾ ದೇವಿ ಟ್ರಸ್ಟ್ ಹಾಗೂ ನಾಣಿ ಕೇರಿ ದೈವಸ್ಥರು. ಪತ್ರಿಕೆಯೊಂದಿಗೆ ತಿಳಿಸಿದ್ದಾರೆ.

## ಅಮೆರಿಕ ಕೇಂದ್ರದಲ್ಲಿ ಗುಂಡಿನ ಸದ್ದು

**ವಾಷಿಂಗ್ಟನ್:** ವಿಶ್ವದ ದೊಡ್ಡಣ್ಣ ಅಮೆರಿಕದ ಆಡಳಿತ ಶಕ್ತಿಕೇಂದ್ರ ವೈಟ್ ಹೌಸ್ ನಲ್ಲಿ ಕ್ಷಿಪ್ರ ಬೆಳವಣಿಗೆಯೊಂದು ನಡೆದಿದೆ. ರಾತ್ರಿ ವೈಟ್ ಹೌಸ್ ವರದಿಗಾರರ ವಾರ್ಷಿಕ ಔತಣ–ಕೂಟ ಕಾರ್ಯಕ್ರಮದಲ್ಲಿ ಹಠಾತ್ ಶೂಟೌಟ್ ಸದ್ದು ಕೇಳಿಬಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಸುರಕ್ಷಿತವಾಗಿ ಅಧಿಕಾರಿಗಳು ಸ್ಥಳಾಂತರಿಸಿದ ಘಟನೆ ನಡೆದಿದೆ. ಅಮೆರಿಕದ ಇತರ ಪ್ರಮುಖ ನಾಯಕರನ್ನು ಕೂಡ ಸ್ಥಳಾಂತರಿಸಲಾಯಿತು. ತಕ್ಷಣಕ್ಕೆ ಯಾವುದೇ ಸಾವುನೋವುಗಳಾದ ವರದಿಯಾಗಿಲ್ಲ, ಒಬ್ಬ ಕಾನೂನು ಜಾರಿಗೆ ಸಂಬಂಧಿಸಿದ ಅಧಿಕಾರಿ ಗುಂಡಿನ ದಾಳಿ ನಡೆದಿರುವುದಾಗಿ ತಿಳಿಸಿದ್ದಾರೆ.

# ಕುರ್ಚಿ ತಳ, ಅಹಿಂದದಾಳ


### ಶಾಂತವಾಗದ ಕುರ್ಚಿ ಕದನ | ದೆಹಲಿಯಲ್ಲಿ ಕ್ಷಿಪ್ರ ಬೆಳವಣಿಗೆ | ಗುಟ್ಟು ಬಿಟ್ಟುಕೊಡದ ಹೈಕಮಾಂಡ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ರಾಜಕೀಯದಲ್ಲಿ ಸಿಎಂ ಕುರ್ಚಿ ವಿಷಯ ಮತ್ತೆ ಚರ್ಚೆಗೆ ಗ್ರಾಸವಾಗಿದೆ. ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ದೆಹಲಿ ಧುರೀಣರನ್ನು ಭೇಟಿ ಮಾಡಿ ಸಿಎಂ ಕುರ್ಚಿಗಾಗಿ ಪಟ್ಟುಹಿಡಿದಿದ್ದರೆ ಮುಖ್ಯಮಂತ್ರಿ ಬಣ ಮಾತ್ರ ಮತ್ತೆ ಅಹಿಂದ ಸಮಾವೇಶದ ದಾಳ ಸಿದ್ಧ ಪಡಿಸಿದೆ. ಏತನ್ಮಧ್ಯೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರತಿಕ್ರಿಯಿಸಿ, ಯಾವ ಮುಖ ಇಟ್ಟುಕೊಂಡು ಕಾಂಗ್ರೆಸ್ ಪಕ್ಷವು ಅಹಿಂದ ಸಮಾವೇಶ ಮಾಡುತ್ತದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

**ನಾಯಕತ್ವಬದಲಾವಣೆ?:** ಐದು ರಾಜ್ಯಗಳ ವಿಧಾನಸಭೆ ಚುನಾವಣೆ, ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಫಲಿತಾಂಶಗಳು ಮೇ 4 ರಂದು ಪ್ರಕಟವಾದ ಬಳಿದ ನಾಯಕತ್ವದಲ್ಲಿ ಬದಲಾವಣೆಯಾಗಬಹುದು. ಸಿಎಂ ಅವರಿಗೆ ತಮ್ಮ ಸಚಿವ ಸಂಪುಟ ಪುನಾರಚನೆಗೆ ಅವಕಾಶ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

**ಮುಖ್ಯಮಂತ್ರಿ ಗೌಪ್ಯ ಸಭೆ:** ಏತನ್ಮಧ್ಯೆ ಸಿಎಂ ಸಿದ್ದರಾಮಯ್ಯ ಬಣದ ನಾಯಕರು ಬೆಂಗಳೂರಲ್ಲಿ ಗೌಪ್ಯ ಸಭೆ ನಡೆಸಿದ್ದು, ಇದು ಊಹಾಪೋಹಗಳಿಗೆ ಮತ್ತಷ್ಟು ಪುಷ್ಟಿ ನೀಡಿದೆ. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ನಿವಾಸದಲ್ಲಿ ನಡೆದ ಈ ಸಭೆ, ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆ ಶುರುವಾಗುವಂತೆ ಮಾಡಿದೆ.



### ಖರ್ಗೆ ಜೊತೆ ನಡೆದ ಚರ್ಚೆ?

ಡಿ.ಕೆ. ಶಿವಕುಮಾರ್ ಅವರು ತಮ್ಮ ಸಹೋದರ ಜೊತೆಗೂಡಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಯಲ್ಲಿ ಭೇಟಿ ಯಾಗಿ ದೀರ್ಘ ಕಾಲ ಚರ್ಚಿಸಿದ್ದಾರೆ. ಈ ವೇಳೆ, 2023ರಲ್ಲಿ ಸರ್ಕಾರ ರಚನೆಯಾಗುವಾಗ ಮಾಡಿಕೊಂಡಿದ್ದ ಅಧಿಕಾರ ಹಂಚಿಕೆ ಒಪ್ಪಂದವನ್ನು ನೆನಪಿಸಿ, ಸಿಎಂ ಸ್ಥಾನ ಹಸ್ತಾಂತರವಾಗಬೇಕು ಎಂಬ ವಿಷಯವನ್ನು ಅವರು ಒತ್ತಿ ಹೇಳಿದ್ದಾರೆ ಎಂದು ತಿಳಿದು ಬಂದಿದೆ.

### ಒಪ್ಪಂದದ ಬಗ್ಗೆ ಸ್ಮರಣೆ

ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನೂ ಸಂಪರ್ಕಿಸಲು ಅವರು ಪ್ರಯತ್ನಿಸಿದ್ದಾರೆ. ಈ ಬಗ್ಗೆ ಕೆ.ಸಿ. ವೇಣುಗೋಪಾಲ್ ಅವರ ಜೊತೆಯೂ ದೂರವಾಣಿ ಮಾತುಕತೆ ನಡೆದಿದೆ ಎಂದು ತಿಳಿದುಬಂದಿದೆ ಶಾಸಕ ಡಾ.ಎಚ್.ಡಿ. ರಂಗನಾಥ್ ಹೇಳಿದ್ದು ಗಮನ ಸೆಳೆದಿದೆ.

### ಸಿಎಂ ಕುರ್ಚಿ ಭದ್ರ: ಸಚಿವ

ರಾಜ್ಯ ರಾಜಕೀಯದಲ್ಲಿ ಸಿಎಂ ಹುದ್ದೆ ಬದಲಾವಣೆ ಕುರಿತು ಚರ್ಚೆಗಳು ತೀವ್ರಗೊಂಡಿದ್ದು, ಈ ನಡುವೆ ಸಚಿವ ಕೆ. ವೆಂಕಟೇಶ್ ಉಪಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಬಣ ಕುರಿತು ಟೀಕೆ ಮಾಡಿದ್ದಾರೆ. ಸಿಎಂ ಆಗಬೇಕೆಂಬ ಆಸೆ ಹೊಂದುವುದು ತಪ್ಪಲ್ಲ, ಆದರೆ. ಆ ಹುದ್ದೆ ಈಗ ಖಾಲಿ ಇಲ್ಲ ಎಂದು ಹೇಳಿದ್ದಾರೆ. ನಾಯಕತ್ವ ಬದಲಾವಣೆಯ ಬಗ್ಗೆ ಯಾವುದೇ ಗೊಂದಲ ಇಲ್ಲ ಎಂದಿದ್ದಾರೆ.

### ಪಕ್ಷದ ಮೇಲೆ ದೃಢವಿಶ್ವಾಸ

ಡಿ.ಕೆ. ಶಿವಕುಮಾರ್ ಅವರು ಮೇ 15 ರಂದು ತಮ್ಮ ಹುಟ್ಟುಹಬ್ಬ ಯಾರೂ ಕೂಡ ಆಚರಿಸಬಾರದು. ಫ್ಲೆಕ್ಸ್, ಬ್ಯಾನರ್ ಹಾಕದಂತೆ ಸ್ಪಷ್ಟ ಸೂಚನೆ ನೀಡಿದ್ದಾರೆ. ಪಕ್ಷದಲ್ಲಿನ ಸಿಎಂ ಕುರ್ಚಿ ಕಾದಾಟ ಮತ್ತು ಸಚಿವ ಸಂಪುಟ ಪುನಾರಚನೆ ಕುರಿತ ಗೊಂದಲಗಳ ನಡುವೆ, ಸಚಿವ ಸತೀಶ್ ಜಾರಕಿಹೊಳಿ ಪಕ್ಷದಲ್ಲಿ ಗೊಂದಲವಿದೆ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿ, ನಮಗೆ ನಮ್ಮ ಪಕ್ಷದ ಮೇಲೆ ವಿಶ್ವಾಸ ಇದೆ ಎಂದಿದ್ದಾರೆ.

## ಬಿಸಿಗಾಳಿಯ ಜೊತೆಗೆ ಮಳೆ ಸಾಧ್ಯತೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಸಂಜೆ ವೇಳೆಗೆ ಬಾಗಲಕೋಟೆ, ವಿಜಯಪುರ ಹಾಗೂ ಕೊಡಗಿನಲ್ಲಿ ಗುಡುಗು ಮಿಂಚು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಒಂದು ವಾರ ಕರ್ನಾಟಕದ ಕರಾವಳಿ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಅಲ್ಲಲ್ಲಿ ಹಗುರದಿಂದ ಕೂಡಿದ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ರಾಜ್ಯದಲ್ಲಿ ತಾಪಮಾನ ಏರಿಕೆಯೂ ಮುಂದುವರಿದಿದ್ದು, ಕೊಪ್ಪಳದಲ್ಲಿ ಗರಿಷ್ಠ 41 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಇನ್ನು ಬೆಂಗಳೂರಿನಲ್ಲಿ 36 ಡಿಗ್ರಿ ಮತ್ತು ಮಂಗಳೂರಿನಲ್ಲಿ 35 ಡಿಗ್ರಿ ಸೆಲ್ಸಿಯಸ್ ತಾಪಮಾನ ಕಂಡುಬಂದಿದೆ.

ಏಪ್ರಿಲ್ 29 ರಿಂದ ಮೇ 2 ರವರೆಗೆ ನಗರದ ವಿವಿಧೆಡೆ ಮಳೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ. ಬೆಂಗಳೂರಿನಲ್ಲಿ ಒಂದು ವಾರದವರೆಗೆ ಗರಿಷ್ಠ ತಾಪಮಾನ 36 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ತಾಪಮಾನ 23 ಡಿಗ್ರಿ ಸೆಲ್ಸಿಯಸ್ ಇರಲಿದೆ.

## ನಮ್ಮ ಭಿಕ್ಷೆಯಿಂದ ಕೈಗೆ ಅಧಿಕಾರ

• ಮಲ್ಲಮ್ಮ ನುಡಿ ವಾರ್ತೆ ಚಿತ್ರದುರ್ಗ

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಏನೆಲ್ಲಾ ನಡೆಯಿತು ಎಂಬುದನ್ನು ನೋಡಿದ್ದೇವೆ. ಒಂದು ನಿರ್ದಿಷ್ಟ ಸಮುದಾಯವನ್ನು ಕಾಂಗ್ರೆಸ್ ಯಾವ ರೀತಿ ಅಪಮಾನಿಸಿ ಶಂಕಿಸಿ ನೋಡಿತು ಎಂಬುದನ್ನು ಕೂಡ ಕಂಡಿದ್ದೇವೆ. ವಾಸ್ತವ ಸ್ಥಿತಿ ಈಗಿರುವಾಗ ಯಾವ ಮುಖ ಇಟ್ಟುಕೊಂಡು ಕಾಂಗ್ರೆಸ್ ಪಕ್ಷವು ಹುಬ್ಬಳ್ಳಿಯಲ್ಲಿ ಅಹಿಂದ ಸಮಾವೇಶ ಮಾಡುತ್ತದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ. ಚಿತ್ರದುರ್ಗದಲ್ಲಿ ಮಾತನಾಡಿ,



ಕುರ್ಚಿ ಉಳಿಸಿಕೊಳ್ಳಲು ಅಹಿಂದ ಸಮಾವೇಶ ಮಾಡಲು ಹೊರಟಿದ್ದಾರೆ. ನಮ್ಮ ಭಿಕ್ಷೆಯಿಂದ ಕಾಂಗ್ರೆಸ್ ಗೆ ಅಧಿಕಾರ ಸಿಕ್ಕಿದೆ ಎಂದು ಅಹಿಂದ ವರ್ಗದ ಜನ ಹೇಳುತ್ತಿದ್ದಾರೆ. ಆಮೇಲೆ, ದಾವಣಗೆರೆಯಲ್ಲಿ ಅದೇ ಅಹಿಂದ ವರ್ಗವನ್ನು ಕಾಂಗ್ರೆಸ್ ಅಪಮಾನಕರವಾಗಿ ನಡೆಸಿಕೊಂಡಿದೆ ಎಂದಿದ್ದರೆ.

## ರಾಷ್ಟ್ರಪ್ರೇಮ, ನಾಯಕತ್ವ ಗುಣಕ್ಕೆ ಸಹಕಾರಿ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ರಾಮಕೃಷ್ಣ ವಿದ್ಯಾಶಾಲೆಯು ಕೇವಲ ಅಂಕಗಳಿಗೆ ಸೀಮಿತವಾಗದೆ, ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳು, ರಾಷ್ಟ್ರಪ್ರೇಮ, ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದ ಆದರ್ಶಗಳನ್ನು ಅಳವಡಿಸಿಕೊಂಡು, ಮನುಷ್ಯ ನಿರ್ಮಾಣ ಶಿಕ್ಷಣ ತತ್ವದಡಿಯಲ್ಲಿ ಶೈಕ್ಷಣಿಕ, ಉತ್ಕೃಷ್ಟತೆ, ದೈಹಿಕ ಶಕ್ತಿ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಬೋಧಿಸುತ್ತದೆ ಎಂದು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಅಭಿಪ್ರಾಯಪಟ್ಟಿದ್ದಾರೆ.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ 2025–26ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ 606 ಅಂಕ ಪಡೆದ ಬಸವವೈಭವ ಚೆನ್ನಬಸವಣ್ಣ ಬಳತೆ ಅವರನ್ನು ಸನ್ಮಾನಿಸಿ, ಆಶೀರ್ವದಿಸಿ ಅವರು ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ಶುಭಾಂಗಿ ಚೆನ್ನಬಸವಣ್ಣ, ಚೆನ್ನಬಸವಣ್ಣ ಬಳತೆ, ಕಾಶಿನಾಥ ಕೊಡಗೆ, ಹಿರೇಮಠ ಸಂಸ್ಥಾನ ವಿದ್ಯಾಪೀಠದ ಆಡಳಿತಾಧಿಕಾರಿ ಮೋಹನ ರೆಡ್ಡಿ ಹಾಜರಿದ್ದರು.



ಇಂತಹ ಪ್ರತಿಷ್ಠಿತ ಶಾಲೆಯಲ್ಲಿ ಕಲಿತ ನಮ್ಮ ಬೀದರ ಜಿಲ್ಲೆಯ ಭಾಲ್ಕಿಯ ಕು.ಬಸವವೈಭವ ಚನ್ನಬಸವಣ್ಣ ಬಳತೆ ಎಸ್ಸೆಸ್ಸೆಲ್ಸಿಯಲ್ಲಿ 606 ಅಂಕ ಪಡೆದಿರುವುದು ತುಂಬಾ ಸಂತಸ ತಂದಿದೆ. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು.
–ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು
ಅಧ್ಯಕ್ಷರು, ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್

**ಬಸವವೈಭವ ಅವರ ಭವಿಷ್ಯ ಉಜ್ವಲ**

ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ವಿದ್ಯಾರ್ಥಿ ಬಸವವೈಭವ ಅವರ ಮುಂದಿನ ಭವಿಷ್ಯ ಉಜ್ವಲವಾಗಲಿ. ಇಲ್ಲಿ ಕಲೆ ಜ್ಞಾನ ಆತನ ಭವ್ಯ ಭವಿಷ್ಯ ರೂಪಿಸಲಿ. ಮಕ್ಕಳಲ್ಲಿ ಆರಂಭಿಕ ಶಿಕ್ಷಣ ಭದ್ರವಾಗಿದ್ದರೆ ಅವರ ಭವಿಷ್ಯವೂ ಸುಭದ್ರವಾಗಿರುತ್ತದೆ ಎಂದು ಹಾರೈಸಿದ್ದಾರೆ.

## ಆಸ್ತಿ ವಿಚಾರಕ್ಕಾಗಿಯೇ ಕೌಟುಂಬಿಕ ಕಲಹ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಆಸ್ತಿ ವಿಚಾರಕ್ಕೆ ಸಂಬಂಧಿಸಿದ ಕೌಟುಂಬಿಕ ಕಲಹವು ಗಂಭೀರ ತಿರುವು ಪಡೆದಿದೆ. ಈ ಘಟನೆಯಲ್ಲಿ ತಂದೆ ಮತ್ತು ಸಹೋದರರೇ ಸೇರಿ ಪುತ್ರಿಯ ಮೇಲೆ ಹಲ್ಲೆ ನಡೆಸಿರುವುದು ಆತಂಕ ಉಂಟು ಮಾಡಿದೆ. ಈ ಘಟನೆ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ದೇವತ್ಕಲ್ ಗ್ರಾಮದಲ್ಲಿ ನಡೆದಿದೆ. ಹಲ್ಲೆಗೆ ಒಳಗಾದ ವಿಜಯಲಕ್ಷ್ಮಿ ಕಣ್ಣೀರಲ್ಲಿ ತತ್ತರಿಸುತ್ತಿದ್ದು, ಗಂಭೀರ ಗಾಯಗಳಿಂದ ಯಾದಗಿರಿಯ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪೊಲೀಸ್ ಮಾಹಿತಿಯ ಪ್ರಕಾರ, ವಿಜಯಲಕ್ಷ್ಮಿಯ ತಾಯಿ ಹುಲಗಮ್ಮಳ ತವರೂರು ಪೀರಾಪುರ ಗ್ರಾಮದಲ್ಲಿರುವ ಜಮೀನಿನ ಆಸ್ತಿ ವಿಚಾರವೇ ಈ ದುರಂತಕ್ಕೆ ಕಾರಣವಾಗಿದೆ. ಈ ಜಮೀನಿನ ಮೇಲಿನ ಹಕ್ಕು ವಿಚಾರವಾಗಿ ಕುಟುಂಬದಲ್ಲಿ




ದೀರ್ಘಕಾಲದಿಂದ ಕಲಹ ನಡೆಯುತ್ತಿತ್ತು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ತಂದೆ ಹಣಮಂತ ಹಾಗೂ ಪುತ್ರರು ಗೋವಿಂದರಾಜ್ ಮತ್ತು ವೆಂಕಟೇಶ ಸೇರಿದಂತೆ ಕೆಲವರು ವಿಜಯಲಕ್ಷ್ಮಿಯ ಮೇಲೆ ಹಲ್ಲೆ ನಡೆಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಘಟನೆಯ ನಂತರ ವಿಜಯಲಕ್ಷ್ಮಿಯನ್ನು ಯಾದಗಿರಿಯ ಯೀಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತನ್ನ ಜೀವಕ್ಕೆ ಭಯವಿದೆ ಎಂದು ಹೇಳಿ ಪೊಲೀಸರಿಂದ ರಕ್ಷಣೆ ನೀಡುವಂತೆ ಮನವಿ ಮಾಡಿದ್ದಾರೆ. ಈ ಸಂಬಂಧ ಸುರಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

### ರೀಲ್ಸ್ ಮಾಡುವುದಕ್ಕೂ ಸೋದರರ ವಿರೋಧ

ವಿಜಯಲಕ್ಷ್ಮಿ ಶಾರ್ಟ್ ಮೂವಿಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಮಾಡಿ ಅದರಿಂದ ಬಂದ ಆದಾಯದ ಮೂಲಕ ಜೀವನ ನಡೆಸುತ್ತಿದ್ದರು. ಆದರೆ ಈ ವಿಚಾರಕ್ಕೂ ಸಹೋದರರಿಂದ ವಿರೋಧ ವ್ಯಕ್ತವಾಗುತ್ತಿದ್ದು, ಅವಮಾನಕಾರಿ ಮಾತುಗಳೊಂದಿಗೆ ಪದೇ ಪದೇ ಕಿರುಕುಳ ನೀಡಲಾಗುತ್ತಿತ್ತು ಎಂದು ತಿಳಿದುಬಂದಿದೆ.

**ಯಡಿಯೂರಪ್ಪ ಅವರು ಐವತ್ತು ವರ್ಷಗಳ ಕಾಲ ಸಮಾಜಸೇವೆ ಮಾಡಿದ್ದು, ಪಕ್ಷ ಸಂಘಟನೆಗೆ ದುಡಿದ್ದಾರೆ: ಮಾಜಿ ಸಚಿವ ಶ್ರೀರಾಮುಲು**

# ಗುರುನಾಥ ರಾಜಗೀರಾ ವಿರಚಿತ ಸರ್ವೇ ಜನಾ ಪುಸ್ತಕೋ ಭವಂತು ಕೃತಿ ಬಿಡುಗಡೆ




**ಮಲ್ಲಮ್ಮ ನುಡಿ ವಾರ್ತೆ ಬೀದರ**

ಜನವರಿ ಕೊನೆವಾರದಲ್ಲಿ ಬೀದರ ನಗರದಸಾಯಿಶಾಲೆಯಮೈದಾನದಲ್ಲಿ ಹಿರೇಮಠ ಸಂಸ್ಥಾನ ಭಾಲ್ಕಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ ಹಾಗೂ ಗುರುನಾಥ ರಾಜಗೀರಾ ನೇತೃತ್ವದಲ್ಲಿ ಐತಿಹಾಸಿಕವಾಗಿ ಜರುಗಿದ ವೀರಲೋಕ ಪುಸ್ತಕ ಸಂತೆಯ ಸಮಗ್ರಮಾಹಿತಿಯುಳ್ಳ ಸರ್ವೇ ಜನಾ ಪುಸ್ತಕೋ ಭವಂತು ಎಂಬ ಕೃತಿಯನ್ನು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಲೋಕಾರ್ಪಣೆಗೊಳಿಸಿದರು.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಅವರ ಅಮೃತ ಮಹೋತ್ಸವದ ವೇದಿಕೆಯಲ್ಲಿ ಲೋಕಾರ್ಪಣೆಗೊಳಿಸಿ ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೇ ಮಾಡಿದ ಕಾಯಕವನ್ನದಾಖಲಿಸಿಅದನ್ನುಕೃತಿ ರೂಪದಲ್ಲಿ ಹೊರ ತಂದಿರುವುದು ಶ್ಲಾಘನೀಯವಾಗಿದೆ ಮತ್ತು ಯುವಸಮೂಹಕ್ಕೆ ಪ್ರೇರಣೆ–ಯಾಗಿದೆ ಎಂದರು.

ಈ ಕೃತಿಯ ಮುಖಪುಟವು ಸಾಂಸ್ಕೃತಿಕನಾಯಕಬಸವಣ್ಣನವರ ಭಾವಚಿತ್ರದೊಂದಿಗೆಜಿಲ್ಲೆಯಐತಿಹಾಸಿಕ ಸ್ಥಳಗಳ ಚಿತ್ರಗಳನ್ನೊಳಗೊಂಡು ಆಕರ್ಷಣಿಯವಾಗಿದೆಕೃತಿಯೊಳಗಡೆ ಪುಸ್ತಕ ಸಂತೆಯ ತಯಾರಿ, ಪೂಜ್ಯರಿರ್ವರ ಸಂದೇಶ, ಸಂತೆಗೆ ಬಂದಅನೇಕಸಾಹಿತಿಗಳುಕಂಡಂತೆ ಅವರ ಅಭಿಪ್ರಾಯಗಳು,ವಿವಿಧ ಇಲಾಖೆಗಳ ಸುತ್ತೋಲೆಗಳು, ಸಂತೆಯ ಸಮಗ್ರ ವಿಡಿಯೋ ವಿಕ್ಷಿಸಿಸಲು ಕ್ಯೂರ್ ಸ್ಕ್ಯಾನರ್ ಕೋಡ್,ಆಮಂತ್ರಣ ಪತ್ರಿಕೆ ಹಾಗೂ ಆಯ್ದ ಕೆಲ ಭಾವಚಿತ್ರಗಳನ್ನು ಸೇರಿಸಿ ಗುರುನಾಥ ರಾಜಗೀರಾ ಅವರು ಸರ್ವೇ ಜನಾ ಪುಸ್ತಕೋ ಭವಂತೋ ಎಂಬ ಕೃತಿಯನ್ನು ರಚಿಸಿದ್ದು ವೀರಕಪುತ್ರ ಶ್ರೀನಿವಾಸ ಅವರ ನೇತೃತ್ವದ ವೀರಲೋಕ ಪ್ರಕಾಶನವು ಪ್ರಕಟಿಸಿದ್ದು ಈ ಕೃತಿಯನ್ನು ಭಾಲ್ಕಿಯ ಹಿರೇಮಠಕ್ಕೆ ಹಾಗೂ ಅಮೃತ ಮಹೋತ್ಸವದ ಸಂಭ್ರಮದಲ್ಲಿರುವ ಪೂಜ್ಯರಾದ ಡಾ.ಬಸವಲಿಂಗ ಪಟ್ಟದ್ದೇವರಿಗೆ ಹಾಗೂ ಓದುಗರಿಗೆ ಅರ್ಪಿಸಲಾಗಿದೆ.

ಈ ಸಂದರ್ಭದಲ್ಲಿ ಹಿರೇಮಠ ಸಂಸ್ಥಾನದ ಪೀಠಾಧಿಪತಿಗಳಾದ ಗುರುಬಸವ ಪಟ್ಟದ್ದೇವರು, ನಾಡಿನ ಹೆಸರಾಂತ ಸಾಹಿತಿ ಗೋರುಚ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ ಹಾನಗಲ್, ಜಿಲ್ಲಾ ಕಸಾಪ ಕೋಶಾಧ್ಯಕ್ಷ ಡಾ.ಶಿವಶಂಕರ ಟೋಕರೆ ಸೇರಿದಂತೆ ಅನೇಕ ಪೂಜ್ಯರು ಹಾಗೂ ಸಾಹಿತಿಗಳಿದ್ದರು.

> ಪುಸ್ತಕಗಳನ್ನೆ ಕೇಂದ್ರಿಕರಿಸಿಕೊಂಡು ನಡೆದ ಈ ಪುಸ್ತಕ ಸಂತೆ ರಾಜ್ಯ ಮಟ್ಟದ ಸಾಹಿತ್ಯ ಹಾಗೂ ಪುಸ್ತಕಲೋಕದ ಚರಿತ್ರೆಯಲ್ಲಿ ದಾಖಲಾಗುವ ಹಾಗೆ ಯಶಸ್ವಿಯಾಗಿದೆ ಈ ಪುಸ್ತಕ ಸಂತೆಯು ಮುಂದಿನ ಜಿಲ್ಲೆಗೆ ಅಥವಾ ಮುಂದಿನ ಪೀಳಿಗೆಗೆ ತಲುಪಿಸಲು ಅನೂಕುಲವಾಗುವ ನಿಟ್ಟಿನಲ್ಲಿ ಈ ಕೃತಿಯನ್ನು ಪ್ರಕಟಿಸಿದ್ದೇವೆ ಇದನ್ನು ಪ್ರಕಟಿಸಲು ಗುರುನಾನಕ್ ದೇವ್ ಇಂಜಿನಿಯರಿಂಗ್ ಕಾಲೇಜಿನ ಡಾ.ಸರ್ದಾರ್ ಬಲಬೀರಸಿಂಗ್ ಅವರು ಸಹಕರಿಸಿದ್ದಾರೆ.
>
> **ಗುರುನಾಥ ರಾಜಗೀರಾ**
>
> **ಬೀದರ ಪುಸ್ತಕ ಸಂತೆಯ ರೂವಾರಿಗಳು, ಹಾಗೂ ಕೃತಿಕಾರರು**

# ಬಲ್ಲೂರ್ ಜೆ ಇಂದಿರಾಗಾಂಧಿ ವಸತಿ ಶಾಲೆಗೆ 100% ಫಲಿತಾಂಶ

**ಮಲ್ಲಮ್ಮ ನುಡಿ ವಾರ್ತೆ ಬೀದರ**

ಔರಾದ್ (ಬಾ) ತಾಲೂಕಿನ ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆ ಬಲ್ಲೂರು ಜೆ ಶಾಲೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 100% ಪ್ರತಿಶತ ಫಲಿತಾಂಶ ಸಾಧಿಸಿದೆ

ಪರೀಕ್ಷೆಗೆ ಹಾಜರಾದ 42 ಮತ್ತು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ 13 ಅಗ್ರ ಶ್ರೇಣಿ 26 ಪ್ರಥಮ್ ದರ್ಜೆ ಹಾಗೂ ಮೂರು ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ಪಾಸ್ ಆಗಿದ್ದಾರೆ,

ಸಿದ್ಧಾರೂಡ ಈಶ್ವರ್ 95.20 ಅಂಕ ಪಡೆದು ಶಾಲೆಗೆ



ಪ್ರಥಮ್ ಸ್ಥಾನ ಪಡೆದುಕೊಂಡಿದ್ದಾರೆ ಪ್ರಜ್ವಲ್ ಪ್ರಭಾಕರ್ 93. ವಿನೋದ್ ರಾಜಕುಮಾರ್ 92.32% , ಅರ್ಜುನ್ ಬಾಲಾಜಿ 92.56% ವಿನೋದ್ ವೈಜಿನಾಥ್ 90.40% ಆಶಾರಾಣಿ ಸೈದಾಪ್ಪ 88.48% ಪ್ರೇಮ್ ಶಿವಕುಮಾರ್ 88.16% ಎಂ. ಬಿ ಸುದರ್ಶನ್ 87.84% ಶೀತಲ್ ಬಸವರಾಜ್ 87.68% ವೈಭವ ಪದ್ಮಾಕರ್ 87.36% ಪರಮೇಶ್ ಮಲ್ಲಿಕಾರ್ಜುನ್ 86.40% ಪೂಜಾ ಮಹಾದೇವ್ 86.24% ಈ ವಿದ್ಯಾರ್ಥಿ ಅಗ್ರಶ್ನೆಯಲ್ಲಿ ಉತ್ತೀರ್ಣರಾಗಿದ್ದಾರೆ

ಪ್ರಾಂಶುಪಾಲರು ಸುನಿಲ್ ಕುಮಾರ್ ಸಿಂಗಾರೆ, ಉಪ ಪ್ರಾಂಶುಪಾಲರೂ ಶ್ರೀಮತಿ ಶೇಶಿರೇಖಾ ಭಗವತಿ ಶಿಕ್ಷಕರು ಗೋವಿಂದ್ ರಾವ್ ಪಾಟೀಲ್, ರೇಣುಕಾ ಬಿರಾದಾರ್, ಪದ್ಮಾವತಿ ಬಿಗೋಂಕರ್, ಪ್ರಕಾಶ್ ಎಸ್. ಮಹಾವೀರ ಹುಲ್ಲಳ್ಳಿ, ರಾಮಣ್ಣಾ ಕುಂಬಾರ್ ಸೈಯದ್ ಶಾಬಾದ್ ಅಲಿ, ಪ್ರಕಾಶ್ ಮಾಳೆ, ನಿಲಯ ಪಾಲಕರು ಡಾ. ಶ್ರೀಮಂತ ಸಪಾಟೆ ಪ್ರಥಮ್ ದರ್ಜೆ ಸಹಾಯಕರು ವಿಜಯಲಕ್ಷ್ಮಿ, ಜ್ಯೋತಿ ಸಿಂಧೆ, ಸ್ಟಾಪ್ ನರ್ಸ್ ಡಿ ಗ್ರೂಪ್ ನೌಕರ ಸಿಬ್ಬಂದಿ ನವೀನ್ ಸಿದ್ಧಲಿಂಗ ಸುಜಾತಾ, ಅನಿತಾ, ಜಗದೇವಿ, ಜೈಶ್ರೀ,ರತಿಕಾ, ಇವರು ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದಿಸಿದ್ದಾರೆ

# ಸಾಂತ್ವನ ಹೇಳಿ, ವೈಯಕ್ತಿಕ ಧನಸಹಾಯ

**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**



ತಾಲೂಕಿನ ನಾವದಗಿ ಗ್ರಾಮದ ಹೊಲದಲ್ಲಿ ಕೆಲಸ ಮಾಡುತ್ತಿರುವ ಇಬ್ಬರು ಯುವಕರು ಗುರುವಾರ ಸಿಡಿಲು ಬಡಿದು ಮೃತ ಪಟ್ಟಿದ್ದು, ಶನಿವಾರ ಅವರ ಮನೆಗೆ ಮಾಜಿ ಶಾಸಕರಾದ ಪ್ರಕಾಶ್ ಖಂಡ್ರೆ ಅವರು ಭೇಟಿ ನೀಡಿ, ಕುಟುಂಬಸ್ಥರಿಗೆ ಧೈರ್ಯ ತುಂಬಿ, ಸಾಂತ್ವಾನ ಹೇಳಿ, ವೈಯಕ್ತಿಕ ಧನಸಹಾಯ ಮಾಡಿದರು. ನಂತರ ಮಾತನಾಡಿದ ಪ್ರಕಾಶ್ ಖಂಡ್ರೆ, ಪ್ರಕೃತಿ ವಿಕೋಪದ ಬಗ್ಗೆ ಯಾರಿಂದಲೂ ಏನೂ ಮಾಡಲು ಸಾಧ್ಯವಿಲ್ಲ, ನಿಮ್ಮ ಮಗನ ಸಾವು ಅನಿರೀಕ್ಷಿತ, ನಿಮ್ಮ ದುಃಖದಲ್ಲಿ ನಾವು ಭಾಗಿಯಾಗಿದ್ದೇವೆ ಎಂದು ಸಾಂತ್ವನ ಹೇಳಿ, ಸರ್ಕಾರದಿಂದ 5 ಲಕ್ಷ ಪರಿಹಾರ ಕೂಡಲೇ ಒದಗಿಸಲು ಸಹಾಯ ಮಾಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಹಿರಿಯರಾದ ಶ ಕಿಶನ್ ರಾವ್ ಪಾಟೀಲ್ ಚಿಂಚೂರಕರ್, ವೆಂಕಟ್ ಬಿರಾದರ್, ರಾಜಶೇಖರ್ ಬಿರಾದಾರ್, ಗುರಯ್ಯಸ್ವಾಮಿ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**

**ಪ್ರಧಾನ ಸಂಪಾದಕರು**

**ಮೋ: 9845028349**

# ಸರಳತೆ ಜೀವನಕ್ಕೆ ಮಹತ್ವ ನೀಡಿ

ಇಂದಿನ ಆಧುನಿಕ ಯುಗದಲ್ಲಿ ಮಾನವನ ಜೀವನಶೈಲಿ ದಿನದಿಂದ ದಿನಕ್ಕೆ ಸಂಕೀರ್ಣವಾಗುತ್ತಿದೆ. ಹಣ, ಆಸ್ತಿ, ಅಧಿಕಾರ, ವೈಭವಗಳ ಹಿಂದೆ ಓಡುತ್ತಿರುವ ಜನರು ಸರಳ ಜೀವನದ ನಿಜವಾದ ಸಂತೋಷವನ್ನು ಮರೆತಿದ್ದಾರೆ. ಆದರೆ ನಿಜವಾದ ಸುಖ ಮತ್ತು ಶಾಂತಿ ದೊರೆಯುವುದು ಸರಳತೆಯಲ್ಲೇ ಎಂಬುದನ್ನು ಸಮಾಜ ಅರಿತುಕೊಳ್ಳಬೇಕು.

ಸರಳತೆ ಎಂದರೆ ಬಡತನವಲ್ಲ; ಅದು ಶಿಸ್ತಿನ, ಸೌಜನ್ಯದ ಮತ್ತು ಸಮತೋಲನದ ಜೀವನ. ಅಗತ್ಯವಿರುವಷ್ಟೇ ಬಳಸುವುದು, ವ್ಯರ್ಥ ಖರ್ಚು ತಪ್ಪಿಸುವುದು, ಅಹಂಕಾರವಿಲ್ಲದೆ ಬದುಕುವುದು  ಇವೆಲ್ಲವೂ ಸರಳ ಜೀವನದ ಲಕ್ಷಣಗಳಾಗಿವೆ. ಸರಳ ವ್ಯಕ್ತಿತ್ವವು ಸಮಾಜದಲ್ಲಿ ಗೌರವವನ್ನು ಹೆಚ್ಚಿಸುತ್ತದೆ.

ಇಂದು ಮದುವೆ, ಹಬ್ಬ-ಹರಿದಿನ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅನಗತ್ಯ ಖರ್ಚು ಹೆಚ್ಚಾಗಿದೆ. ಸಾಲ ಮಾಡಿ ವೈಭವ ತೋರಿಸುವ ಮನೋಭಾವ ಹೆಚ್ಚುತ್ತಿರುವುದು ಆತಂಕಕಾರಿ. ಇದರಿಂದ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿವೆ. ಆದ್ದರಿಂದ ಸಮಾಜದಲ್ಲಿ ಸರಳ ವಿವಾಹ, ಸರಳ ಆಚರಣೆಗಳಿಗೆ ಉತ್ತೇಜನ ನೀಡಬೇಕು.

ಮಹಾತ್ಮ ಗಾಂಧೀಜಿ, ಬಸವಣ್ಣ, ಡಾ. ಬಿ.ಆರ್. ಅಂಬೇಡ್ಕರ್ ಮೊದಲಾದ ಮಹಾನ್ ನಾಯಕರು ಸರಳ ಜೀವನದ ಮೂಲಕವೇ ಜನಮನ ಗೆದ್ದವರು. ಅವರ ಜೀವನ ನಮಗೆ ಆದರ್ಶವಾಗಿದೆ. ವ್ಯಕ್ತಿಯ ಮಹತ್ವವು ಅವನ ಉಡುಪು, ಮನೆ ಅಥವಾ ಸಂಪತ್ತಿನಲ್ಲಿ ಅಲ್ಲ; ಅವನ ಗುಣ, ನಡತೆ ಮತ್ತು ಸೇವಾಭಾವದಲ್ಲಿ ಇದೆ.

ಪಾಲಕರು ಮಕ್ಕಳಿಗೆ ಬಾಲ್ಯದಿಂದಲೇ ಸರಳ ಜೀವನದ ಮೌಲ್ಯಗಳನ್ನು ಕಲಿಸಬೇಕು. ಶಿಕ್ಷಣದ ಜೊತೆಗೆ ಸಂಸ್ಕಾರವೂ ಮುಖ್ಯ. ಸರಳತೆ ಇದ್ದರೆ ಮಾನವೀಯತೆ ಬೆಳೆಯುತ್ತದೆ, ಸಮಾಜದಲ್ಲಿ ಸಮಾನತೆ ಬಲವಾಗುತ್ತದೆ.

ಆದ್ದರಿಂದ ಪ್ರತಿಯೊಬ್ಬರೂ ಸರಳತೆ ಜೀವನಕ್ಕೆ ಮಹತ್ವ ನೀಡಿ ಬದುಕಬೇಕು. ವೈಭವದ ಪ್ರದರ್ಶನಕ್ಕಿಂತ ಮೌಲ್ಯಯುತ ಜೀವನವೇ ಶ್ರೇಷ್ಠ. ಸರಳ ಜೀವನವೇ ಸುಂದರ ಜೀವನ ಎಂಬ ಸತ್ಯವನ್ನು ನಾವು ಮರೆಯಬಾರದು.

# ನಿರ್ಣಾ ಸರ್ಕಾರಿ ಕನ್ಯಾ ಪ್ರೌಢ ಶಾಲೆಗೆ ಪೂರ್ಣಿಮಾ ಪ್ರಥಮ

**ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**







ಗ್ರಾಮೀಣ ಭಾಗದಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುತ್ತಿರುವ ನಿರ್ಣಾ ಗ್ರಾಮದ ಸರ್ಕಾರಿ ಕನ್ಯಾ ಪ್ರೌಢ ಶಾಲೆಯು 2025–26ನೇ ಸಾಲಿನ ಮಾರ್ಚ್ ನಲ್ಲಿ ನಡೆದ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ಪಡೆದು ಗಮನ ಸೆಳೆದಿದೆ. ಶಾಲೆಯ ವಿದ್ಯಾರ್ಥಿನಿ ಪೂರ್ಣಿಮಾ ತಂದೆ ಸಂತೋಷ 593 (94.88%) ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದರೆ, ದ್ವಿತೀಯ ಸ್ಥಾನವನ್ನು ಸಂಧ್ಯಾ ತಂದೆ ರಾಜಕುಮಾರ 565 (9.40%), ಅಂಕ ಗಳಿಸಿದ್ದಾರೆ, ತೃತೀಯ ಸ್ಥಾನ ಸಂಜನಾ ತಂದೆ ಮಾಣಿಕ 554 (88.64%), ಸುಘಂದಾ ತಂದೆ ಸುರೇಶ್ 544 (87.04%), ಲಕ್ಷ್ಮಿ ತಂದೆ ರಾಮಚಂದ್ರ 529 (84.64%), ಸುರೇಖಾ ತಂದೆ ತುಕಾರಾಮ 520 (83.20%), ಪವಿತ್ರಾ ತಂದೆ ರಾಚಪ್ಪ 506 (80.96%), ಸಂಜನಾ ತಂದೆ ಗೋಪಾಲ 506 (80.96%), ವಿಜಯಲಕ್ಷ್ಮಿ ತಂದೆ ಪ್ರಭು 491(78.56%), ವೈಷ್ಣವಿ ತಂದೆ ರಾಜು 481 (76.96%) ಅಂಕಗಳನ್ನು ಪಡೆದುಕೊಂಡು ಶಾಲೆಗೆ ಕೀರ್ತಿ ತಂದಿದ್ದಾರೆ. ಈ ಸಾಲಿನಲ್ಲಿ ಒಟ್ಟು 70 ಮಕ್ಕಳು ಪರೀಕ್ಷೆಗೆ ಹಾಜರಿದ್ದು 04 ಮಕ್ಕಳು ಆಗ್ರಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. 20 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ದ್ವಿತಿಯ ದರ್ಜೆ 27 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾ–ರೆ. 14 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 04 ವಿದ್ಯಾರ್ಥಿಗಳು ಅನುತೀರ್ಣರಾಗಿದ್ದಾರೆ. ಈ ಸಂದರ್ಭದಲ್ಲಿ ಪತ್ರಿಕೆಯೊಂದಿಗೆ ಮುಖ್ಯೋಪಧ್ಯಾಯಿನಿ ಸರುಬಾಯಿ ಪವರ್ ಮಾತನಾಡಿ, ಕಳೆದ ಹಲವು ವರ್ಷಗಳಿಂದಲೂ ನಮ್ಮ ಶಾಲೆಯ ಫಲಿತಾಂಶದಲ್ಲಿ ಪ್ರಗತಿ ಕಂಡು ಬರುತ್ತಿದ್ದು, ವಿದ್ಯಾರ್ಥಿಗಳ ಶ್ರಮ, ಶಿಕ್ಷಕರ ಗುಣಮಟ್ಟದ ಶಿಕ್ಷಣದಿಂದ ಹಾಗೂ ಎಸ್ಡಿಎಂಸಿ ಸರ್ವ ಸದಸ್ಯರ ಮತ್ತು ಪೋಷಕರ ಸಹಕಾರದಿಂದ ಉತ್ತಮ ಫಲಿತಾಂಶ ಪಡೆಯಲು ಸಾಧ್ಯವಾಯಿತು. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಫಲಿತಾಂಶ ಪಡೆಯಲು ಪ್ರಮಾಣಿಕ ಪ್ರಯತ್ನ ನೆಡೆಸಲಾಗುತ್ತದೆ ಎಂದು ತಿಳಿಸಿದರು.

# ಉರ್ದು ಮಾಧ್ಯಮ ವಿದ್ಯಾರ್ಥಿಗಳ ಅಮೋಘ ಸಾಧನೆ: ಶೇ. 93.30 ಫಲಿತಾಂಶ

**ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**



ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್) ಉರ್ದು ಮಾಧ್ಯಮದ ವಿದ್ಯಾರ್ಥಿಗಳು 2025–26ನೇ ಸಾಲಿನ ಎಸ್. ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅದ್ಭುತ ಸಾಧನೆ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.

ಶಾಲೆಯ ಒಟ್ಟು 30 ವಿದ್ಯಾರ್ಥಿಗಳಲ್ಲಿ 28 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶಾಲೆಗೆ ಶೇ. 93.30 ರಷ್ಟು ಉತ್ತಮ ಫಲಿತಾಂಶ ತಂದುಕೊಟ್ಟಿದ್ದಾರೆ.

**ವಿಷಯವಾರು ನೂರಕ್ಕೆ ನೂರು ಸಾಧನೆ**

ಬೋಧನಾ ಗುಣಮಟ್ಟಕ್ಕೆ ಸಾಕ್ಷಿಯೆಂಬಂತೆ ಉರ್ದು, ಕನ್ನಡ, ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಿಷಯಗಳಲ್ಲಿ ಶೇ. 100 ರಷ್ಟು ಫಲಿತಾಂಶ ದಾಖಲಾಗಿದೆ.

ಫಿರದೋಷ ನಯುಮ್ ಶಾಲಾ ಟಾಪರ್ ವಿದ್ಯಾರ್ಥಿನಿ ಫಿರದೋಷ ನಯುಮ್ ಒಟ್ಟು 625 ಅಂಕಗಳಿಗೆ 595 (ಶೇ. 95.20) ಅಂಕಗಳನ್ನು ಪಡೆಯುವ ಮೂಲಕ ಶಾಲೆಗೆ ಪ್ರಥಮ ಸ್ಥಾನ ಅಲಂಕರಿಸಿದ್ದಾಳೆ. ಈಕೆಯ

**ವಿಷಯವಾರು ಸಾಧನೆ ಹೀಗಿದೆ:**

ಉರ್ದು: 119, ಕನ್ನಡ: 96, ಇಂಗ್ಲಿಷ್: 98, ಗಣಿತ: 88, ವಿಜ್ಞಾನ: 99, ಸಮಾಜ ವಿಜ್ಞಾನ: 95.


ಇತರೆ ಸಾಧಕ ವಿದ್ಯಾರ್ಥಿಗಳು: ಜವೇರಿಯಾ (ಶೇ.84), ಸುಮಯ್ಯಾ (ಶೇ. 83.52), ಸಾನಿಯಾ (ಶೇ. 81.76), ಝೀಕ್ರಾ ಬಾನು (ಶೇ. 78.08), ಆಸಿಯಾ (ಶೇ. 77.12) ಹಾಗೂ ಅನಿಷಾ (ಶೇ. 76.12) ಅವರು ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ. ಒಟ್ಟಾರೆಯಾಗಿ ಒಬ್ಬ ವಿದ್ಯಾರ್ಥಿನಿ ಡಿಸ್ಟಿಂಕ್ಷನ್, 14 ವಿದ್ಯಾರ್ಥಿಗಳು ಪ್ರಥಮ ದರ್ಜೆ, 9 ವಿದ್ಯಾರ್ಥಿಗಳು ದ್ವಿತೀಯ ದರ್ಜೆ ಹಾಗೂ 4 ವಿದ್ಯಾರ್ಥಿಗಳು ಪಾಸ್ ಕ್ಲಾಸ್‌ನಲ್ಲಿ ತೇರ್ಗಡೆಯಾಗಿದ್ದಾರೆ.

ಜನತೆಯ ಬೇಡಿಕೆಗೆ ಸಂದ ಫಲ

ಕಮಲನಗರದಲ್ಲಿ ಸರ್ಕಾರಿ ಪ್ರೌಢ ಶಾಲೆ ಇರಬೇಕೆಂಬುದು ಸಾರ್ವಜನಿಕರ ಬಹುಕಾಲದ ಬೇಡಿಕೆಯಾಗಿತ್ತು. ಈ ಶೈಕ್ಷಣಿಕ ವರ್ಷದಿಂದ ಆರಂಭವಾದ ಕೆಪಿಎಸ್ ಶಾಲೆಯ ಮೊದಲ ತಂಡವೇ ಇಂತಹ ದೊಡ್ಡ ಸಾಧನೆ ಮಾಡಿರುವುದು ಹೆಮ್ಮೆಯ ವಿಷಯವಾಗಿದೆ. ವಿದ್ಯಾರ್ಥಿಗಳ ಈ ಯಶಸ್ಸಿಗೆ ಶಾಲೆಯ ಮುಖ್ಯಗುರುಗಳಾದ ಸಂಜೀವಕುಮಾರ ಡೋಂಗ್ರೆ, ಶಿಕ್ಷಕರಾದ ಮಹ್ಮದ್ ಫಯುಮ್, ಮಹಾದೇವ ಮಡಿವಾಳ, ಆನಂದ, ಹಾಗೂ ಅತಿಥಿ ಶಿಕ್ಷಕರಾದ ಶೇಕ್ ಷಕಿಲ್, ಸೊಭಿಯಾ ಮತ್ತು ಐಷಾ ಅವರುಗಳು ಹರ್ಷ ವ್ಯಕ್ತಪಡಿಸಿ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ

## ಸಿಡಿಲು ಬಡಿದು ಸಾವು!

# ಸಚಿವ ಈಶ್ವರ್ ಖಂಡ್ರೆ ಭೇಟಿ। ಪರಿಹಾರ ವಿತರಣೆ



**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ತಾಲೂಕಿನ ನಾವದಗಿ ಗ್ರಾಮದಲ್ಲಿ ಕಳೆದ ಏ.23ರಂದು ಸಂಜೆ ಸಿಡಿಲು ಬಡಿತದಿಂದ ಇಬ್ಬರು ಯುವಕರು ಮೃತಪಟ್ಟ ದುರ್ಘಟನೆ ನನಗೆ ಅತ್ಯಂತ ನೋವು ತಂದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು. ಭಾನುವಾರ ತಾಲೂಕಿನ ನಾವದಗಿ ಗ್ರಾಮಕ್ಕೆ ಭೇಟಿ ನೀಡಿದ ಸಚಿವರು, ರೇವಣಸಿದ್ದ ಹನಮಂತ ಕೋಳಿ ಅವರ ಕುಟುಂಬ ಸದಸ್ಯರಿಗೆ ಧೈರ್ಯ ತುಂಬಿ ಸಾಂತ್ವನ ತಿಳಿಸಿ, ಅವರ ಕುಟುಂಬಕ್ಕೆ –5 ಲಕ್ಷ ಪರಿಹಾರ ಧನದ ಚೆಕ್ ವಿತರಿಸಿದರು. ಅದೇ ದುರ್ಘಟನೆಯಲ್ಲಿ ಮೃತರಾದ ಜೇವರ್ಗಿ ತಾಲೂಕಿನ ಯಲ್ಲಾಲಿಂಗ ಅವರ ಕುಟುಂಬಕ್ಕೂ ಸಹ –5 ಲಕ್ಷ ಪರಿಹಾರ ಧನವನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ನಾವದಗಿ ಗ್ರಾಮದ ರೇವಣಸಿದ್ದಪ್ಪ ಹಾಗೂ ಜೇವರ್ಗಿ ತಾಲೂಕಿನ ಸಿಗರತಹಳ್ಳಿ ಗ್ರಾಮದ ಯಲ್ಲಾಲಿಂಗ ಅವರ ನಿಧನಕ್ಕೆ ಸಚಿವರು ಸಂತಾಪ ಸೂಚಿಸಿದ್ದಾರೆ. ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತವು ಸಿಡಿಲು ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಹೆಚ್ಚಿನ ಎಚ್ಚರಿಕೆ ಹಾಗೂ ಜಾಗೃತಿ ಮೂಡಿಸುವ ಕಾರ್ಯವನ್ನು ಕೈಗೊಳ್ಳಬೇಕೆಂದು ಸಚಿವರು ಸೂಚನೆ ನೀಡಿದ್ದಾರೆ. ಕಳೆದ ಏಪ್ರಿಲ್ 23 ರಂದು ನಾವದಗಿ ಗ್ರಾಮದಲ್ಲಿ ರೇವಣಸಿದ್ದ ಅವರು ಸಹಪಾಠಿ ಸ್ನೇಹಿತ ಯಲ್ಲಾಲಿಂಗ ಅವರು ಜಮೀನಿಗೆ ತೆರಳಿದ ವೇಳೆ ಮಳೆ ಬರುತ್ತಿರುವುದನ್ನು ಕಂಡು ರಕ್ಷಣೆಗಾಗಿ ಮಾವಿನ ಮರದಡಿ ಆಶ್ರಯ ಪಡೆದಿದ್ದಾಗ ಸಿಡಿಲು ಬಡಿದು ಸ್ಥಳದಲ್ಲೇ ಮೃತಪಟ್ಟಿದ್ದರು. ಪರಿಹಾರ ವಿತರಣೆ ಸಮಯದಲ್ಲಿ ತಹಶೀಲ್ದಾರ್ ಮಲ್ಲಿಕಾರ್ಜುನ್ ವದ್ದನಕೇರಿ ಸೇರಿದಂತೆ ಅನುಷ್ಠಾನ ಅಧಿಕಾರಿಗಳು ಗ್ರಾಮಸ್ಥರು ಉಪಸ್ಥಿತರಿದ್ದರು.

# 29ರಂದು ಸಕಲ ಮರಾಠಾ ಸಮಾಜದಿಂದ ಅಂಬೇಡ್ಕರ್ ಜಯಂತಿ ಆಚರಣೆ: ದಾದಾ ಮಹಾರಾಜ ನಗರಕರ್

**ಮಲ್ಲಮ್ಮ ನುಡಿ ವಾರ್ತೆ ಬೀದರ್:**




ಈ ತಿಂಗಳ 29ರಂದು ಸಾಯಂಕಾಲ 5 ಗಂಟೆಗೆ ನಗರದ ಅಂಬೇಡ್ಕರ್ ಹಾಗೂ ಛತ್ರಪತಿ ಶಿವಾಜಿ ಮಹಾರಾಜ ವೃತ್ತದ ಮಧ್ಯದಲ್ಲಿನ ರಸ್ತೆಯಲ್ಲಿ ಬೃಹತ್ ವೇದಿಕೆ ನಿರ್ಮಿಸಿ ಅಲ್ಲಿ ಸಂವಿಧಾನ ಶಿಲ್ಪಿ ಡಾ.ಭೀಮರಾವ ಅಂಬೇಡ್ಕರ್ ಅವರ ಜಯಂತ್ಯೋತ್ಸವ ಸಂಭ್ರಮ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಗುವುದೆಂದು ಸಮಾಜದ ಪೂಜ್ಯರಾದ ದಾದಾ ಮಹಾರಾಜ ನಗರಕರ್ ತಿಳಿಸಿದರು.

ಭಾನುವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಹರಿದು ಹಂಚಿ ಹೋಗುತ್ತಿರುವ ಸಣ್ಣ ಸಣ್ಣ ಸಮಾಜಗಳನ್ನು ಒಂದು ಗೂಡಿಸುವುದು. ದಲಿತ ಸಮುದಾಯ ಹಾಗೂ ಮರಾಠಾ ಸಮುದಾಯಗಳನ್ನು ಒಗ್ಗೂಡಿಸುವ ಉದ್ದೇಶದಿಂದ ಪ್ರತಿ ವರ್ಷ ಮರಾಠಾ ಸಮಾಜದಿಂದ ಅಂಬೇಡ್ಕರ್ ಜಯಂತಿ ಆಚರಿಸುತ್ತ ಬರುತ್ತಲಿದ್ದೇವೆ. ಈ ಮೊದಲು ಮಹಾರಾಷ್ಟ್ರದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವು. ಈ ವರ್ಷದಿಂದ ಕರ್ನಾಟಕದಲ್ಲಿಯೂ ಸಹ ಸಯ್ಯಾಜಿರಾವ ಗಾಯಕವಾಡ ಹಾಗೂ ಶಾಹೂ ಮಹಾರಾಜರ ತತ್ವಗಳನ್ನು ನಮ್ಮ ಸಮುದಾಯಕ್ಕೆ ಪರಿಚಯಿಸುವ ಕಾರ್ಯ ಮಾಡಬೇಕಾದ ಹಿನ್ನೆಲೆ ಈ ಕಾರ್ಯಕ್ರಮ ಸೂಕ್ತವಾಗಿದೆ ಎಂದರು.

ಅಣದುರ ವೈಶಾಲಿ ನಗರದ ಪೂಜ್ಯ ಭಂತೆ ಸಂಘರಕ್ಷಿತ ಅವರು ಮಾತನಾಡಿ, ಅಂಬೇಡ್ಕರ್ ಅವರು ಒಂದು ಸಮುದಾಯದ ಆಸ್ತಿ ಅಲ್ಲ ಅವರು ಸರ್ವ ಸಮುದಾಯದ ಬೆಳಕು. ಹಾಗಾಗಿ ಪರಸ್ಪರ ಸಮುದಾಯಗಳು ಸಾಮೂಹಿಕವಾಗಿ ಸೇರಿ ಇಂಥ ಮಹಾತ್ಮರ ಜಯಂತಿಗಳನ್ನು ಆಚರಿಸುತ್ತ ಬಂದರೆ ಧರ್ಮ ರಹಿತ, ಜಾತಿರಹಿತದಿಂದ ಕೂಡಿದ ಸಮಾಜ ಸಂಘಟಿಸಬಹುದಾಗಿದೆ ಎಂದರು.

ನ್ಯಾಯವಾದಿ ನಾರಾಯಣ ಗಣೇಶ ಮಾತನಾಡಿ, ಈ ಕಾರ್ಯಕ್ರಮವನ್ನು ಉದ್ಘಾಟಿಸಲು ಕಾರ್ಮಿಕ ಸಚಿವ ಸಂತೋಷ ಲಾಡ್ ಆಗಮಿಸುತ್ತಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಸಚಿವ ರಹಿಮ್ ಖಾನ್, ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರನ್ನು ಕಾರ್ಯಕ್ರಮಕ್ಕೆ ಅವ್ಹಾನಿಸಲಾಗುತ್ತಿದೆ. ಒಟ್ಟಾರೆ ಇದೊಂದು ಸರ್ವಧರ್ಮದ ಶಾಂತಿಯ ತೋಟ ಎಂಬಂತೆ ಎಲ್ಲ ಪಕ್ಷದವರನ್ನು ಸಹ ಕಾರ್ಯಕ್ರಮಕ್ಕೆ ಅವ್ಹಾನಿಸಿ ರಾಜಕೀಯ ರಹಿತ ಕಾರ್ಯಕ್ರಮವನ್ನಾಗಿ ಮಾಡಲಾಗುತ್ತದೆ ಎಂದರು.

ಲಿಡ್ಕರ್ ಬೋರ್ಡ್ ಅಧ್ಯಕ್ಷ ಮುಂಡರಗಿ ನಾಗರಾಜ


ಮಾತನಾಡಿ, ಸಂತೋಷ ಲಾಡ್ ಅವರು ಪ್ರತಿಯೊಂದು ಜಿಲ್ಲೆಗಳಲ್ಲಿ ಇಂತಹ ಧರ್ಮಾಧಾರಿತ, ಜಾತಿ ರಹಿತ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಗಡಿ ಜಿಲ್ಲೆ ಬೀದರ್‌ನಲ್ಲಿ ಸಹ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ದಲಿತ ಮುಖಂಡರಾದ ಮಹೇಶ ಗೋರನಾಳಕರ್, ಬಾಬುರಾವ ಪಾಸ್ವಾನ್,

ಮರಾಠಾ ಸಮಾಜದ ಗೋವಿಂದರಾವ ಜಾಧವ, ಭೋವಿ ವಡ್ಡರ್ ಸಮಾಜದ ಅಧ್ಯಕ್ಷ ತಾನಾಜಿ ಸಗರ್ ಮಾತನಾಡಿದರು. ದಲಿತ ಮುಖಂಡರಾದ ಡಾ.ಕಾಶಿನಾಥ ಚಲ್ವಾ, ಧನರಾಜ ಮುಸ್ತಾಪುರೆ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಮೇ 7 ರಂದು ಅವರ್ಸಾದ ಶ್ರೀ ಭೂದೇವಿ ಬಂಡಿಹಬ್ಬ

**ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ:**



ತಾಲೂಕಿನ ಅವರ್ಸಾದ ಶ್ರೀ ಭೂದೇವಿ ದೇವಿಯ ಬಂಡಿಹಬ್ಬವು ಮೇ. 6, 7 ರಂದು ನಡೆಯಲಿದೆ. ಬಂಡಿಹಬ್ಬದ ನಿಮಿತ್ತ ಏ. 24 ರಂದು ಆವಾರಿ ಮೂಲಕ ಬಂಡಿಹಬ್ಬಕ್ಕೆ ಚಾಲನೆ ನೀಡಲಾಗಿತ್ತು. ಏ. 25 ರಂದು ಶೇಷೆ ಹಾಕುವುದು, ಮೇ. 1 ರಂದು ದೇವರ ಕರೆಯುವುದು, ಮೇ 4 ರಂದು ಮಾಸ್ತಿ ಬಿಳುವುದು, ಮೇ 6 ರಂದು ಬಂಡಿಹಬ್ಬ, ಮೇ 7 ರಂದು ಮರು ಬಂಡಿಹಬ್ಬ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಮೇ 1ರಿಂದ ಮೂರನೇ ಕಣ್ಣಿನ ಕಲೆ : ಬೇಸಿಗೆ ಶಿಬಿರ




**ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ:**
ನೀಲಗಂಗಾ ಎಜ್ಯೂಕೇಷನಲ್ ಟ್ರಸ್ಟ್ ಆಶ್ರಯದಲ್ಲಿ ನೀಲಗಂಗ ಆಯುರ್ವೇದಿಕ್ ಔಷಧೀಯ ವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಾಸಕ್ಕಾಗಿ ಮೂರನೇ ಕಣ್ಣಿನ ಕಲೆ (ಆರನೇ ಇಂದ್ರೀಯ ಜಾಗೃತಿ) ಶಿಬಿರವನ್ನು ಮೇ.1ರಿಂದ ತಾಲೂಕಿನ ಯರಬಾಗದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ನೀಲಗಂಗಾ ಎಜ್ಯೂಕೇಷನಲ್ ಟ್ರಸ್ಟ್ ಅಧ್ಯಕ್ಷರಾದ ಡಾ.ಅನೀತಾ ಎಸ್. ಮಹಾಜನ್ ಹೇಳಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ,

ಇಂದು ನಾವೆಲ್ಲ ನಮ್ಮ ಭವಿಷ್ಯದ ಭಾರತದ ಬಗ್ಗೆ ಯೋಚನೆ ಮಾಡಬೇಕಿದೆ. ಮುಂದಿನ ಪೀಳಿಗೆಗೆ ಜಾಗೃತಿ ಮೂಡಿಸಬೇಕಾದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ನಮ್ಮ ನೀಲಗಂಗಾ ಎಜ್ಯೂಕೇಷನಲ್ ಟ್ರಸ್ಟ್ ಆಶ್ರಯದಲ್ಲಿ ನೀಲಗಂಗ ಆಯುರ್ವೇದಿಕ್ ಔಷಧೀಯ ವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಾಸಕ್ಕಾಗಿ ನಿರಂತರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ ಎಂದು ಹೇಳಿದರು.

ಮೂರನೇ ಕಣ್ಣಿನ ಕಲೆ ಕುರಿತು ಆರನೇಯ ಇಂದ್ರಿಯದ ಬಗ್ಗೆ 5 ರಿಂದ 16 ವರ್ಷದ ವಯಸ್ಸಿನವರಿಗೆ ವಿಶೇಷ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಮಕ್ಕಳಿಗೆ ಕಣ್ಣು ಮುಚ್ಚಿಸಿ ಕಣ್ಣಿನ ಮೇಲೆ ಪಟ್ಟಿ ಕಟ್ಟಿದಾಗಲೂ 6ನೇ ಇಂದ್ರಿಯ, ಥರ್ಡ್ ಐ (ಚಿತ್ರ) ಸಂಯಮ ಶಕ್ತಿಯಿಂದ ಬಣ್ಣ, ವಸ್ತುಗಳನ್ನು, ಉಡುಗೆ–ತೊಡುಗೆಗಳನ್ನು ಗುರುತಿಸುವ, ಓಡುವ, ಓದುವ, ಆಟ ಆಡುವ, ಬರೆಯುವ, ಬಣ್ಣ ಹಾಕುವ, ಚಿತ್ರ ಬಿಡಿಸುವ ಇತ್ಯಾದಿ ಚಟುವಟಿಕೆಗಳನ್ನು ಮಾಡಿ ಧನಾತ್ಮಕ ಸ್ಫೂರ್ತಿಯನ್ನು ಈ ವಿದ್ಯೆಯಿಂದ ಪಡೆದುಕೊಳ್ಳುತ್ತಾರೆ. ಮಗುವಿನ ಮೂರನೆ ಮೂರನೆ ಕಣ್ಣನ್ನು ಸಕ್ರಿಯಗೊಳಿಸಿ, ವಿಶೇಷ ಸಾಧನೆ ಹಾಗೂ ಮಾನಸಿಕ ಜಾಗೃತಿಯನ್ನು ಹೆಚ್ಚಿಸುತ್ತದೆ. ಹೀಗಾಗಿ ನಿಮ್ಮ ಮಗುವಿನ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಈ ವಿದ್ಯೆ ಹೆಚ್ಚು ಪ್ರಯೋಜನವಾಗಲಿದೆ. ನಿಮ್ಮ ಮಕ್ಕಳ ಭವಿಷ್ಯ ಇನ್ನಷ್ಟು ಉಜ್ವಲಗೊಳ್ಳುವಂತೆ ಮಾಡುವ ದೃಷ್ಟಿಯಿಂದ ಆಸಕ್ತ ಪಾಲಕರು ಹಾಗೂ ಮಕ್ಕಳು ಪಾಲ್ಗೊಳ್ಳಬಹುದಾಗಿದೆ. ಈ ಶಿಬಿರದಿಂದ ಮಕ್ಕಳು ಹೆಚ್ಚು ಮೊಬೈಲ್ ಬಳಕೆಯಿಂದ ದೂರ ಇರಲು ಪ್ರೇರಣೆಯಾಗಲಿದೆ.

ಮಕ್ಕಳಲ್ಲಿ ಗ್ರಹಿಸುವ ಶಕ್ತಿಯನ್ನು ಗಣನೀಯವಾಗಿ ಹೆಚ್ಚಿಸುತ್ತದೆ.

ಮಗುವಿನಲ್ಲಿ ದಿವ್ಯದೃಷ್ಟಿ ಜಾಗೃತಗೊಳ್ಳುತ್ತದೆ. ಎಲ್ಲಾ ತರಹದ ಶೈಕ್ಷಣಿಕ ಬುದ್ಧಿವಂತಿಕೆ ಚುರುಕುಗೊಳ್ಳುತ್ತದೆ. ನಿಮ್ಮ ಮಗುವಿನ ಸುಪ್ತ ಶಕ್ತಿಯ ಸಾಮರ್ಥ್ಯ ನಿಮ್ಮ ಗಮನಕ್ಕೂ ಬರುತ್ತದೆ.

ಮಕ್ಕಳು ಹೊಸ ಚೈತನ್ಯ,

ಉಲ್ಲಾಸ ಹೊಂದುವರು. ಮಕ್ಕಳಲ್ಲಿನ ಸುಪ್ತ ಶಕ್ತಿಯನ್ನು ಹೊರತಂದು ಆತ್ಮ ವಿಶ್ವಾಸವನ್ನು ಹೆಚ್ಚಿಸುವ ಉದ್ದೇಶದಿಂದ ರೂಪಿತಗೊಂಡ ತರಬೇತಿ ಇದಾಗಿದೆ.

ತರಬೇತಿಯಿಂದ ಮಕ್ಕಳ ಇಂದ್ರಿಯಗಳು ಸೂಕ್ಷ್ಮಗೊಳ್ಳುತ್ತವೆ. ಮಕ್ಕಳಲ್ಲಿ ಲವಲವಿಕೆಯ ಚಟುವಟಿಕೆ ಉಂಟಾಗುತ್ತದೆ. ಸೋಮಾರಿತನ, ಹಠಮಾರಿತನ, ಒರಟುತನ ಕಡಿಮೆಯಾಗುತ್ತದೆ. ವಿಷಯದಲ್ಲಿ ಆಸಕ್ತಿ, ಏಕಾಗ್ರತೆ, ನೆನಪಿನ ಶಕ್ತಿ ಬೆಳೆಯುತ್ತದೆ.

ತರಬೇತಿ ಪಡೆದವರ ಜೀವನದಲ್ಲಿ ಖಂಡಿತ ಈ ವಿದ್ಯೆ ಹೊಸ ಹೊಳಪು ನೀಡುತ್ತದೆ. ಪೋಷಕರಲ್ಲಿರುವ ಮಕ್ಕಳು ಒಂದು ಕಡೆ ಕೂಡುತ್ತಿಲ್ಲ, ಏಕಾಗ್ರತೆ ಮಾಡುತ್ತಿಲ್ಲಾ ಎನ್ನುವ ಎಲ್ಲಾ ಸಂಕಟಗಳು ದೂರಗೊಳ್ಳುತ್ತವೆ.

ಭಾಗವಹಿಸುವವರು ಮುಂಚಿತವಾಗಿ ಹೆಸರು ನೋಂದಾಯಿಸಬೇಕಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ. 9844059991 ಸಂಖ್ಯೆಗೆ ಸಂಪರ್ಕಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಶಂಕರಗೌಡ್ರ ಹಾಗೂ ಡಾ.ಕುನಾಲ್ ಚೌಧರಿ, ರುದ್ರಪ್ಪ ಕೆ, ಡಾ.ಶಶಿಕುಮಾರ್, ಗಂಗಾಧರಸ್ವಾಮಿ, ನೂರ್ ಜಾವೇದ್ ಶೇಖ್, ವೃಷಿಕಾ, ಪರಣಿಕಾ, ನೂರ್ ಅಹ್ಮದ್ ಮಕಾನದಾರ ಸೇರಿದಂತೆ ಇತರರು ಇದ್ದರು.

# ಮೇ 4ರಂದು ಮಹಾನಿಯರ ಮೂರ್ತಿ ಸ್ಥಾಪನೆಗೆ ಭೂಮಿ ಪೂಜೆ : ನಾಗೇಶ್



**ಮಲ್ಲಮ್ಮ ನುಡಿವಾರ್ತೆ ಕುಕನೂರ :**
ಪಟ್ಟಣ ಪಂಚಾಯಿತಿ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪಟ್ಟಣ ಪಂಚಾಯಿತಿ ತುರ್ತು ಸಭೆಯಲ್ಲಿ ಅವರು ಮಾತನಾಡಿದರು.

ಜಗಜ್ಯೋತಿ ಬಸವೇಶ್ವರ ಅವರ ಕಂಚಿನ ಮೂರ್ತಿ ಸ್ಥಾಪನೆಗೆ ಹಳೆಯ ಆಸ್ಪತ್ರೆ ಜಾಗವನ್ನು ಕಲ್ಪಿಸಿಕೊಡಲು ಸದಸ್ಯರು ಒಪ್ಪಿಗೆ ಸೂಚಿಸಿದರು.


ಮೇ 4 ರಂದು ನಡೆಯುವ ಮಹನೀಯರ ಮೂರ್ತಿಗಳ ಭೂಮಿ ಪೂಜೆಯ ಕಾರ್ಯವಿಧಾನ ಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಪಟ್ಟಣ ಪಂಚಾಯಿತಿ ಸದಸ್ಯ ರಾಮಣ್ಣ ಬಂಕದ ಮನಿ ಮಾತನಾಡಿ, ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ ಮಹಾನ ಮಹನೀಯರ ಮೂರ್ತಿ ಪ್ರತಿಷ್ಠಾಪನೆ ಮಾಡುತ್ತಿರುವುದು ಸಂತಸದ ವಿಷಯ. ಅದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಕಲ್ಪಿಸಿ ಕೊಡುವುದು ನಮ್ಮ ಕರ್ತವ್ಯ ಆದ್ದರಿಂದ ಅದಕ್ಕೆ ನಮ್ಮ ಪೂರ್ವ ಸಮ್ಮತಿ ಇದೆ ಎಂದು ಹೇಳಿದರು ಸಭೆಯಲ್ಲಿ ಕುಡಿಯುವ ನೀರಿನ ಬಗ್ಗೆ ಚರ್ಚಿಸಲಾಯಿತು. ಕೆಲವು ವಾರ್ಡಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಅಧಿಕಾರಿಗಳು ಅದನ್ನು ಬೇಗ ಪರಿಹರಿಸಬೇಕು ಎಂದು ಸದಸ್ಯರು ಆಗ್ರಹಿಸಿದರು.

ಕೆಆರ್ ಡಿಎಲ್ ಅಧಿಕಾರಿ ಅನಿಲ್ ಪಾಟೀಲ್,

ಪಟ್ಟಣ ಪಂಚಾಯಿತಿ ಅಧ್ಯಕ್ಷ ಲೀಲಾವತಿ ಮಹಾಂತೇಶ್ ಮುಧೋಳ್, ಉಪಾಧ್ಯಕ್ಷ ಮಂಜುಳಾ ಕಲ್ಮನಿ, ಸ್ಥಾಯಿ ಸಮಿತಿ ಅಧ್ಯಕ್ಷ ಕರಮುಡಿ, ಬಾಲರಾಜ್ ಗಾಳಿ, ಸಿದ್ದು ಉಳ್ಳಾಗಡ್ಡಿ, ಲಲಿತಮ್ಮ ಯಡಿಯಾಪುರ, ಶಿವನಗೌಡ ಯಲ್ಲಪ್ಪ ಗೌಡ್ರು, ಪ್ರಶಾಂತ್ ಆರಬೆರಳಿನ್, ಮಲ್ಲು ಚೌದ್ರಿ, ಗಗನ್ ನೋಟಗಾರ, ಲಕ್ಷ್ಮಿ ಸಬರದ, ರಫಿ ಹಿ ರೆಹಾಳ ಹಾಗೂ ಪಟ್ಟಣ ಪಂಚಾಯತಿಯ ಸಿಬ್ಬಂದಿ ವರ್ಗ ಪಾಲ್ಗೊಂಡಿದ್ದರು.

# ಮನ್ ಕಿ ಬಾತ್‌ನಲ್ಲಿ ಕರ್ನಾಟಕದ ಸಾಧನೆಗಳ ಕೊಂಡಾಡಿದ ಪ್ರಧಾನಿ ಮೋದಿ ಜೀ : ಶ್ರೀಧರ ಸಾಹುಕಾರ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**
ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ತಮ್ಮ 133ನೇ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆ, ಪರಿಸರ ಸಂರಕ್ಷಣೆ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರದ ಸಾಧನೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿರುವುದು ಪ್ರತಿಯೊಬ್ಬ ಕನ್ನಡಿಗನಿಗೂ ಹೆಮ್ಮೆಯ ವಿಷಯ ಎಂದು ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.



ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಅವರು ತಮ್ಮ ಜನಸಂಪರ್ಕ ಕಚೇರಿಯಲ್ಲಿ ಮನ್ ಕೀ ಬಾತ್ ಆಲಿಸಿ; ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಪ್ರಧಾನಿಯವರು ಉಲ್ಲೇಖಿಸಿದ ಪ್ರಮುಖ ಅಂಶಗಳ ಬಗ್ಗೆ ಮೆಚ್ಚುಗೆ ಸೂಚಿಸಿದ್ದಾರೆ:

ಕರ್ಮ ಮೊನಾಸ್ಟರಿಯ ಪರಿಸರ ಪ್ರೇಮ: ಕೊಡಗು/ಮೈಸೂರು ಭಾಗದ 'ಕರ್ಮ ಮೊನಾಸ್ಟರಿ'ಯ ಬೌದ್ಧ ಭಿಕ್ಷುಗಳು 100 ಎಕರೆ ಪ್ರದೇಶದಲ್ಲಿ ಅರಣ್ಯ ಬೆಳೆಸಿರುವ ಕಾರ್ಯವನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಿರುವುದು ಪರಿಸರ ಪ್ರೇಮಿಗಳಿಗೆ ದೊಡ್ಡ ಪ್ರೇರಣೆಯಾಗಿದೆ. ಪ್ರಕೃತಿ ಮತ್ತು ಮಾನವನ ಸಹಬಾಳ್ವೆಗೆ ಇದು ಅತ್ಯುತ್ತಮ ಮಾದರಿ ಎಂದು ಹೇಳಿದ್ದಾರೆ. ಸಿರಿಭೂವಲಯದ ಜ್ಞಾನ ವೈಭವ: ಕನ್ನಡದ ಜೈನ ವಿದ್ವಾಂಸ ಕುಮುದೇಂದು ಮುನಿಗಳ 'ಸಿರಿಭೂವಲಯ' ಕೃತಿಯ ಗಣಿತ ಮತ್ತು ಭಾಷಾ ಕೌಶಲ್ಯವನ್ನು ಪ್ರಧಾನಿಯವರು ಸ್ಮರಿಸುವ ಮೂಲಕ, ಕನ್ನಡ ನಾಡಿನ ಜ್ಞಾನ ಪರಂಪರೆಯನ್ನು ಇಡೀ ದೇಶಕ್ಕೆ ಪರಿಚಯಿಸಿದ್ದಾರೆ. ಇದು ನಮ್ಮ ಸಾಹಿತ್ಯಿಕ ಶ್ರೀಮಂತಿಕೆಗೆ ಸಂದ ಗೌರವವಾಗಿದೆ.

ಪವನ ಇಂಧನದಲ್ಲಿ ಮುಂಚೂಣಿ: ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಕರ್ನಾಟಕವು ದೇಶದಲ್ಲೇ ಅಗ್ರಸ್ಥಾನದಲ್ಲಿರುವುದನ್ನು ಪ್ರಧಾನಿಗಳು ಗುರುತಿಸಿರುವುದು ರಾಜ್ಯದ ಅಭಿವೃದ್ಧಿಯ ವೇಗಕ್ಕೆ ಸಾಕ್ಷಿಯಾಗಿದೆ. 2027ರ ಜನಗಣತಿಯನ್ನು ಸಂಪೂರ್ಣ ಡಿಜಿಟಲ್ ರೂಪದಲ್ಲಿ ನಡೆಸುವ ಪ್ರಧಾನಿಯವರ ನಿರ್ಧಾರವು 'ವಿಕಸಿತ್ ಭಾರತ್' ನಿರ್ಮಾಣದತ್ತ ಇಟ್ಟ ದೊಡ್ಡ ಹೆಜ್ಜೆಯಾಗಿದೆ. ಕಾಗದ ರಹಿತ ಮತ್ತು ಪಾರದರ್ಶಕ ಪ್ರಕ್ರಿಯೆಯಿಂದ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಕರ್ನಾಟಕದ ಸಾಧನೆಗಳನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸಿ, ರಾಜ್ಯದ ಜನತೆಗೆ ಉತ್ತೇಜನ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಅವರು ಈ ಮೂಲಕ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ..

# ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಜಿಲ್ಲೆಗೆ ಕೀರ್ತಿ ಹೆಚ್ಚಿಸಿದೆ: ಪೂಜಾರಿ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**
ನಗರದ ಎಸ್. ಡಿ. ಶಿಕ್ಷಣ ಸಂಸ್ಥೆ ಸಂಸ್ಥಾಪಕ, ಅಧ್ಯಕ್ಷ ಶ್ರೀ ದುರ್ಗಪ್ಪ ಹೆಚ್. ಪೂಜಾರಿ ಅವರು ಮಾತನಾಡಿ ನಮ್ಮ ಯಾದಗಿರಿ ಜಿಲ್ಲೆಯು 2025 ರಲ್ಲಿ 53.40 ಶೇಕಡಾ ಫಲಿತಾಂಶದಲ್ಲಿ ಇದ್ದ ಜಿಲ್ಲೆಯು ಇದೀಗ 2026 ರ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 91.89 ಶೇಕಡಾ ಫಲಿತಾಂಶವನ್ನು ಪಡೆದು ಕೊಳ್ಳುವ ಮೂಲಕ ಶೈಕ್ಷಣಿಕ ನಗರಿಯತ್ತ ಎಂಬ ಬಿರಿದು ತನ್ನದ್ದಾಗಿಸುವ ಪ್ರಯತ್ನದಲ್ಲಿ ಹೆಜ್ಜೆಯನ್ನು



ಇಡುತ್ತಿರುವುದು ತುಂಬಾ ಖುಷಿಯನ್ನುಂಟು ಮಾಡಿದೆ. ಈ ಒಂದು ಮಹಾ ಸಾಧನೆಯ ಸಂತೋಷಕ್ಕೆ ಮೂಲ ಕಾರಣಿಕರ್ತ್ರರಾದ ಮಾನ್ಯ ಡಿಡಿಪಿಐ, ಬಿಇಒ, ಸಿಇಒ, ಬಿ ಆರ್ ಪಿ, ಸಿ ಆರ್ ಪಿ ಒಳಗೊಂಡಂತೆ ಸರ್ಕಾರಿ ಅಧಿಕಾರಿಗಳು ಮತ್ತು ಜಿಲ್ಲೆಯ ಎಲ್ಲಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಆಡಳಿತ ಮಂಡಳಿಯವರು ಹಾಗೂ ಮುಖ್ಯೋಪಾಧ್ಯಾಯರು ಶಿಕ್ಷಕರು ಮತ್ತು ಅತಿಥಿ ಶಿಕ್ಷಕರು, ಎಸ್ ಡಿ ಎಮ್ ಸಿ ಅಧ್ಯಕ್ಷರು ಮತ್ತು ಸಮಿತಿ ಸದಸ್ಯರು ಹಾಗೂ ಪಾಲಕರು ಮತ್ತು ಪೋಷಕರು ಸೇರಿದಂತೆ ಮಕ್ಕಳ ಶೈಕ್ಷಣಿಕ ಕಾರ್ಯಾಚಟುವಟಿಕೆಯ ಸಂದರ್ಭದಲ್ಲಿ ಸಹಕಾರ ನೀಡಿ ಅವರಿಗೆ ಪ್ರೋತ್ಸಾಹಿಸಿ

ಬೆಂಬಲಿಸಿ ಪರೀಕ್ಷೆಯ ಭಯ ಹೋಗಲಾಡಿಸಿ ಧೈರ್ಯ ತುಂಬಿದ ಶಿಕ್ಷಣ ಪ್ರೇಯರಿಗೆ ನನ್ನ ಮನದಾಳದ ಕೃತಜ್ಞತೆ ಮತ್ತು ಧನ್ಯವಾದಗಳು ಅರ್ಪಿಸುತ್ತೇನೆ. ಇನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹೆಚ್ಚಿನ ಫಲಿತಾಂಶವನ್ನು ಪಡೆದುಕೊಳ್ಳಲು ನಾವು ನೀವು ಸಿದ್ದರಾಗುವುದರ ಜೊತೆಗೆ ಇದೆ ತರ ಒಂದೊಂದು ಸಾಧನೆಯ ಮೆಟ್ಟಿಲುಗಳನ್ನು ಏರುತ್ತಾ ಸಾಧನೆಯ ಶಿಖರ ಮುಟ್ಟಿ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ಯಾದಗಿರಿ ಜಿಲ್ಲೆಯು ಶೈಕ್ಷಣಿಕ ನಗರಿ ಎಂಬ ಬಿರಿದು ಪಡೆದುಕೊಳ್ಳಲು ಶಕ್ತಿ ಮೀರಿ ಪ್ರಯತ್ನ ಮಾಡೋಣ ಎಂದು ಹೇಳಿದರು. ಇದೆ ಸಂದರ್ಭದಲ್ಲಿ ಎಸ್. ಡಿ. ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕರು ಮತ್ತು ಪಾಲಕರು ಹಾಜರಿದ್ದರು.

# ರಾಷ್ಟ್ರಮಟ್ಟದ ಹ್ಯಾಕಥಾನ್ ಸ್ಪರ್ಧೆಯಲ್ಲಿ ಎಂ.ಎಸ್ ವೆಂಕಟಸಾಯಿ ಪ್ರಥಮ.




**ಶಹಾಪುರದ ಎಂ.ಎಸ್.ವೆಂಕಟಸಾಯಿ ಮತ್ತವರ ತಂಡದ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಹ್ಯಾಕಥಾನ್ ಸ್ಪರ್ಧೆಯ ಪ್ರಥಮ ಬಹುಮಾನವನ್ನು ಸ್ವೀಕರಿಸುತ್ತಿರುವುದು.**

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**
ಗದಗದ ಹುಲಕೋಟಿಯ ಆರ್ ಟಿ ಇ ಸೊಸೈಟಿಯ ರೂರಲ್ ಎಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ ಸೈನ್ಸ ಮತ್ತು ಎಂಜಿನಿಯರಿಂಗ್ ವಿಭಾಗದ ವತಿಯಿಂದ ಇತ್ತೀಚಿಗೆ ಎರಡು ದಿನಗಳ ರಾಷ್ಟ್ರೀಯ ಹ್ಯಾಕಥಾನ್ "ರೆಕಾನ್ 1.0ಎಂಬ ರಾಷ್ಟ್ರಮಟ್ಟದ ಹ್ಯಾಕಥಾನ ಸ್ಪರ್ಧೆಯನ್ನು ಮೊದಲ ಬಾರಿಗೆ ಆಯೋಜಿಸಲಾಗಿತ್ತು.

ಈ ಸ್ಪರ್ಧೆಯಲ್ಲಿ ಶಹಾಪುರದ ಸಹಾಯಕ ಖಜಾನೆ ಅಧಿಕಾರಿ ಹಾಗೂ ಸಂಶೋಧಕ ಡಾ.ಎಂ.ಎಸ್.ಸಿರವಾಳ ಅವರ ಪುತ್ರ ಎಂ.ಎಸ್.ವೆಂಕಟಸಾಯಿ ನೇತೃತ್ವದಲ್ಲಿ ಶಿವಮೊಗ್ಗದ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿನ ವತಿಯಿಂದ ಅವರ ಕೊಡೆ–ಕೊಡೆಕ್ಸ್‌ಎಂಬ ತಂಡದ ಸಮರ್ಥ,ಸೃಜನ,ಹಾಗೂ ವಿಕಾಸ ರವರು ಭಾಗವಹಿಸಿ.ಸುಮಾರು 120 ಜನರನ್ನು ಹಿಂದಿಕ್ಕಿ ರಾಷ್ಟ್ರ ಮಟ್ಟ ಹ್ಯಾಕಥಾನ್ ರೆಕಾನ್ 1.0ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ.

**ವಿದ್ಯಾರ್ಥಿಯ ಈ ಸಾಧನೆಗೆ :**
ಗೋಪಾಲ ಸುರಪುರ,ಭೀಮಾ ಶಂಕರ ಅಣಬಿ,ಶರಣ ಬಸಪ್ಪ ಸಿರವಾಳ ,ಭೀಮರಾಯಕುಸ್ತಿ, ಹಣಮಂತ್ರಾಯ ಸಿರವಾಳ, ಮೌನೇಶ,ಸಿದ್ದು,ಮಲ್ಲಣ್ಣ,ಬಸವರಾಜ,ಸುನೀತಾ ,ಮಹ್ಮದ,ಮೋದಿನ ಪಟೇಲ್ ಅಣಬಿ,ಮುಂತಾದವರು ಹರ್ಷ ವ್ಯಕ್ತಪಡಿಸಿದ್ದಾರೆ.

# ಎಸ್ಸೆಸ್ಸೆಲ್ಸಿಯಲ್ಲಿ ಕೊಪ್ಪಳ ಜಿಲ್ಲೆಗೆ ಶೇ. 93 ರಷ್ಟು ಫಲಿತಾಂಶ

ಮಲ್ಲಮ್ಮ ನುಡಿವಾರ್ತೆ
ಕೊಪ್ಪಳ : 2025–26ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ–1ರ ಫಲಿತಾಂಶ ಏಪ್ರಿಲ್ 23ರಂದು ಪ್ರಕಟಗೊಂಡಿದ್ದು, ಕೊಪ್ಪಳ ಜಿಲ್ಲೆಗೆ ಶೇ. 93 ರಷ್ಟು ಫಲಿತಾಂಶ ಬಂದಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರಗೌಡ ಪಾಟೀಲ ಅವರು ತಿಳಿಸಿದ್ದಾರೆ.

2025–26ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ–1ರ ಪರೀಕ್ಷೆಗಾಗಿ ಜಿಲ್ಲೆಯಲ್ಲಿ ಒಟ್ಟು 21,433 ವಿದ್ಯಾರ್ಥಿಗಳು ಹಾಜರಾಗಿದ್ದು, ಅದರಲ್ಲಿ 19,802 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ರಾಜ್ಯ ಮಟ್ಟದ ಫಲಿತಾಂಶದಲ್ಲಿ ಕೊಪ್ಪಳ ಜಿಲ್ಲೆ ಈ ಬಾರಿ 25ನೇ ಸ್ಥಾನವನ್ನು ಪಡೆದುಕೊಂಡಿದ್ದು, ಕಳೆದ ವರ್ಷ (2024–25) ಪಡೆದಿದ್ದ 30ನೇ ಸ್ಥಾನದಿಂದ 5 ಸ್ಥಾನಗಳ ಜಿಗಿತ ಸಾಧಿಸಿದೆ.

*ತಾಲ್ಲೂಕು ವಾರು ಫಲಿತಾಂಶ:* ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕು ಶೇ. 95.14 ರಷ್ಟು ಫಲಿತಾಂಶದೊಂದಿಗೆ ಜಿಲ್ಲೆಗೆ ಮೊದಲ ಸ್ಥಾನ ಪಡೆದಿದೆ. ಇತರೆ ತಾಲೂಕುಗಳಾದ ಗಂಗಾವತಿ, ಕುಷ್ಟಗಿ ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿ ಕ್ರಮವಾಗಿ 92.88%, 92.45% & 89.53% ಫಲಿತಾಂಶ ದಾಖಲಾಗಿದೆ.

*96 ಶಾಲೆಗಳಲ್ಲಿ ಪ್ರತಿಶತ 100ರಷ್ಟು ಫಲಿತಾಂಶ:* ಜಿಲ್ಲೆಯ ಒಟ್ಟು 96 ಪ್ರೌಢಶಾಲೆಗಳು 100% ಫಲಿತಾಂಶ ಸಾಧಿಸಿದ್ದು, ಯಲಬುರ್ಗಾ ತಾಲೂಕಿನ 35, ಗಂಗಾವತಿಯ 16, ಕುಷ್ಟಗಿಯ 16 ಮತ್ತು ಕೊಪ್ಪಳ ತಾಲ್ಲೂಕಿನ 29 ಶಾಲೆಗಳಲ್ಲಿ ಶೇ. 100ರಷ್ಟು ಫಲಿತಾಂಶ ದಾಖಲೆಯಾಗಿದೆ. ಇದರಲ್ಲಿ ಜಿಲ್ಲೆಯ 34 ಸರ್ಕಾರಿ ಪ್ರೌಢಶಾಲೆಗಳು, 05 ಅನುದಾನಿತ ಪ್ರೌಢಶಾಲೆಗಳು, 39 ಅನುದಾನ ರಹಿತ ಪ್ರೌಢಶಾಲೆಗಳು ಮತ್ತು 18 ವಸತಿ ಶಾಲೆಗಳು ಒಳಗೊಂಡಿರುತ್ತದೆ.

*ಜಿಲ್ಲೆಯ ಟಾಪರ್‌ಗಳ ಪಟ್ಟಿ:* ಕುಕನೂರಿನ ಎಸ್‌ಎಫ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿನಿ ಅನುಷ ಅವರು 625ಕ್ಕೆ 622 ಅಂಕಗಳನ್ನು (99.52%) ಪಡೆಯುವ ಮೂಲಕ ಕೊಪ್ಪಳ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಅದೇ ರೀತಿ ಕನಕಗಿರಿಯ ಎಂ.ಡಿ.ಆರ್.ಎಸ್ ವಿದ್ಯಾರ್ಥಿ ನಾಗರಾಜ ಮತ್ತು ತಳಕಲ್ ಬಾಲಕಿಯರ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಶ್ವೇತ ಅವರು 625ಕ್ಕೆ ತಲಾ 621 (99.36%) ಅಂಕಗಳೊಂದೊಗೆ ಜಿಲ್ಲೆಗೆ ದ್ವಿತೀಯ ಸ್ಥಾನವನ್ನು ಪಡೆದುಕೊಂಡರೆ, ಹೊಸಳ್ಳಿಯ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿ



ಶುಭಪ್ರಿಯ ಮತ್ತು ಕಾಟಾಪುರದ ಎಂ.ಡಿ.ಆರ್.ಎಸ್ ವಿದ್ಯಾರ್ಥಿ ಅಭಿ ಹನಕುಂಟಿ ಅವರು 625ಕ್ಕೆ ತಲಾ 620 ಅಂಕಗಳನ್ನು (99.20%) ಪಡೆಯುವ ಮೂಲಕ ಕೊಪ್ಪಳ ಜಿಲ್ಲೆಗೆ ತೃತೀಯ ಸ್ಥಾನ ಪಡೆದು–ಕೊಂಡಿದ್ದಾರೆ.

*ಫಲಿತಾಂಶ ಹೆಚ್ಚಳಕ್ಕೆ ಜಿಲ್ಲಾ ಹಂತದಲ್ಲಿ ಕೈಗೊಂಡ ಕ್ರಮಗಳು:* ಕೊಪ್ಪಳ ಜಿಲ್ಲೆಯ ಎಸ್.ಎಸ್.ಎಲ್.ಸಿ ಫಲಿತಾಂಶ ಹೆಚ್ಚಳಕ್ಕಾಗಿ ಜಿಲ್ಲಾ ಹಂತದಲ್ಲಿ ಮಿಷನ್–40% ಅನುಷ್ಠಾನ, ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರ ಮಾರ್ಗದರ್ಶನದಲ್ಲಿ ಸ್ಫೂರ್ತಿ ನಡೆ ಕಾರ್ಯಕ್ರಮ ಹಾಗೂ ದಿನಕ್ಕೊಂದು ಪ್ರಶ್ನೆ–ವಾರಕ್ಕೊಂದು ಪರಿಕ್ಷೆ, ಬೋರ್ಡ್ ನಿಂದ ನಡೆಸಲಾದ ಪೂರ್ವ ಸಿದ್ಧತಾ ಪರಿಕ್ಷೆಗಳ ಸಮರ್ಪಕ ಅನುಷ್ಠಾನ, ಆರು ಮಾದರಿ ಪ್ರಶ್ನೆ ಪತ್ರಿಕೆಗಳ–ಅಭ್ಯಾಸ, ಎಲ್.ಬಿ.ಎ ಸಂಪನ್ಮೂಲ ಸದ್ಬಳಕೆ, ಅನುಭವಿ ವಿಷಯ ಸಂಪನ್ಮೂಲ ಶಿಕ್ಷಕರಿಂದ ನೀಲನಕ್ಷೆ ಆಧಾರಿತ ಸಮಗ್ರ ವಿಷಯವಾರು ಸ್ಕೋರಿಂಗ, ಪ್ಯಾಕೇಜ್–ತಯಾರಿಕೆ, ವಿತರಣೆ ಮತ್ತು ಅನುಷ್ಠಾನ, ಜಿಲ್ಲಾ ಹಂತದ ಅಧಿಕಾರಿಗಳಿಂದ ಶಾಲೆಗಳ ದತ್ತು ಸ್ವೀಕಾರ ಹಾಗೂ ಮಾರ್ಗ ದರ್ಶನ, ತಾಯಂದಿರ ಸಭೆ, ಪೋಷಕರ ಸಭೆ, ಎಸ್.ಡಿ.ಎಂ.ಸಿ ಸಹ ಭಾಗಿತ್ವ ಮತ್ತು ಶಾಲಾ ಹಂತದಲ್ಲಿ ಗುಂಪು ಅಧ್ಯಯನ, ವಿಶೇಷ ತರಗತಿಗಳು ವಿದ್ಯಾರ್ಥಿಗಳ ವರ್ಗೀಕರಣ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರಗೌಡ ಪಾಟೀಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಭ್ರಮದಿಂದ ನಡೆದ ಭದ್ರಕಾಳಿ ಬಂಡಿಹಬ್ಬ



**ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ**
:ಇಲ್ಲಿಯ ಆರಾಧ್ಯದೈವ ಶ್ರೀಭದ್ರಕಾಳಿದೇವಿಯ ಬಂಡಿಹಬ್ಬವು ಶನಿವಾರ ಸಂಭ್ರಮಸಡಗರದಿಂದ ನಡೆಯಿತು. ವಾರಗಳ ಕಾಲ ನಡೆಯುವ ಈ ಹಬ್ಬಕ್ಕೆ ತನ್ನದೆ ಆದ ವೈಶಿಷ್ಟ್ಯವಿದೆ. ಹಬ್ಬದ ದಿನದಂದು ಬಂಡೆಗೆ ಬಾಳೆಕೊನೆ ಸೇರಿದಂತೆ ವಿವಿಧ ಅಲಂಕಾರಗಳನ್ನು ಮಾಡಿದ್ದರು. ಇಂದು ಏ. 26 ರಂದು ಮರು ಬಂಡಿಹಬ್ಬ ನಡೆಯಲಿದ್ದು, ಭಕ್ತರು ಹರಕೆಯನ್ನು ತೀರಿಸಲಿದ್ದಾರೆ.

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವಸತಿ ನಿಲಯದ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಸಾಧನೆ

**ಮಲ್ಲಮ್ಮ ನುಡಿವಾರ್ತೆ ಕೊಪ್ಪಳ :**
ಏಪ್ರಿಲ್ 23ರಂದು ಪ್ರಕಟವಾದ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ನಿಲಯದ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ. ಇಲಾಖೆಯ ಅಡಿಯಲ್ಲಿ ಬರುವ 2 ವಸತಿ ನಿಲಯಗಳ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಶೈಕ್ಷಣಿಕ ಗುಣಮಟ್ಟವನ್ನು ಎತ್ತಿಹಿಡಿದಿದ್ದಾರೆ.

ಪರೀಕ್ಷೆಗೆ ಒಟ್ಟು 21 ವಿದ್ಯಾರ್ಥಿಗಳು ಹಾಜರಾಗಿದ್ದು, ಅವರಲ್ಲಿ 18 ವಿದ್ಯಾರ್ಥಿಗಳು ಯಶಸ್ವಿಯಾಗಿ ಉತ್ತೀರ್ಣರಾಗಿದ್ದಾರೆ. ಕೇವಲ 3 ವಿದ್ಯಾರ್ಥಿಗಳು ಫಲಿತಾಂಶದಲ್ಲಿ ಹಿನ್ನಡೆ ಅನುಭವಿಸಿದ್ದಾರೆ. 6 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 6 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 2 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ, 4 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಸೇರಿದಂತೆ ಒಟ್ಟು 18 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಸತಿ ನಿಲಯಗಳಲ್ಲಿ ನೀಡಲಾದ ವಿಶೇಷ ತರಗತಿಗಳು ಮತ್ತು ಶಿಸ್ತುಬದ್ಧ ವ್ಯಾಸಂಗ ಕ್ರಮವೇ ಈ ಯಶಸ್ಸಿಗೆ ಕಾರಣ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

# ವಿಶ್ವ ಶಾಂತಿಗಾಗಿ ರೋಟರಿ ಶಾಂತಿ ನಡಿಗೆ




• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಇರಾನ್-ಯು.ಎಸ್ ಸಂಘರ್ಷದ ಹಿನ್ನೆಲೆ ಜಗತ್ತಿನಾದ್ಯಂತ ಉಂಟಾಗಿರುವ ಅಶಾಂತಿ ಕೊನೆಗೊಳ್ಳಬೇಕು ಎಂಬ ಆಶಯದೊಂದಿಗೆ ಬೀದರ್ ಜಿಲ್ಲೆಯ ಎಲ್ಲಾ ರೋಟರಿ ಕ್ಲಬ್‌ಗಳ ಸಂಯುಕ್ತಾಶ್ರಯದಲ್ಲಿ ಭಾನುವಾರ ಶಾಂತಿ ನಡಿಗೆ ಹಮ್ಮಿಕೊಳ್ಳಲಾಯಿತು. ರೋಟರಿ ಪೇಲ್ಸ್ & ಸೇಲ್ಸ್ ಕಾರ್ಯಕ್ರಮದ ಅಧ್ಯಕ್ಷ ಬಸವರಾಜ ಧನ್ನೂರ ಹಾಗೂ ರೋಟರಿ ಕ್ಲಬ್ ಆಫ್ ಬೀದರ್ ಸಿಲ್ವರ್ ಸ್ಟಾರ್ ಅಧ್ಯಕ್ಷ ಆದಿಶ್ ವಾಲಿ ಅವರ ನೇತೃತ್ವದಲ್ಲಿ ನಗರದ ಬರೀದ ಶಾಯಿ ಗಾರ್ಡನ್‌ನಿಂದ ಪ್ರಾರಂಭವಾದ ಈ ನಡಿಗೆ ನೂತನ ಬಸ್ ನಿಲ್ದಾಣ, ಮಡಿವಾಳ ಮಾಚಿದೇವ ವೃತ್ತದ ಮೂಲಕ ಸಾಗುತ್ತಾ ರೋಟರಿ ಕನ್ನಡಾಂಬೆ ವೃತ್ತದಲ್ಲಿ ಸಮಾಪ್ತಿಯಾಯಿತು.

ಈ ವೇಳೆ ಮಾತನಾಡಿದ ರೋಟರಿ ಕಲ್ಯಾಣ ವಲಯ ಡಿಸ್ಟ್ರಿಕ್ಟ್ ಗವರ್ನರ್ ಎಂ.ಕೆ. ರವೀಂದ್ರ ಅವರು, ವಿಶ್ವದಲ್ಲಿ ಶಾಂತಿ ಸ್ಥಾಪನೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಯುದ್ಧಗಳು ಮಾನವಕುಲಕ್ಕೆ ಅಪಾಯಕಾರಿಯಾಗಿದ್ದು, ಸಹಬಾಳ್ವೆಯ ಮೂಲಕವೇ ಶಾಂತಿ ಸಾಧ್ಯವೆಂದು ತಿಳಿಸಿದರು. ರೋಟರಿ ಕಲ್ಯಾಣ ವಲಯ ಡಿಸ್ಟ್ರಿಕ್ಟ್ ಗವರ್ನರ್ ಕೇಶವ ರೆಡ್ಡಿ ಅವರು ಮಾತನಾಡಿ, ಯುದ್ಧದಿಂದ ವಿನಾಶವೇ ಹೊರತು ಯಾರಿಗೂ ಲಾಭವಿಲ್ಲ. ಧರ್ಮ, ಜಾತಿ ಬೇಧ ಮೀರಿದ ಮಾನವೀಯತೆ ಬೆಳೆಸಿದಾಗ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸಲಿದೆ ಎಂದು ಹೇಳಿದರು.

ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ ಮಾತನಾಡಿ, ಯುದ್ಧದ ದುಷ್ಪರಿಣಾಮಗಳು ಸಮಾಜದ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ವಿಶೇಷವಾಗಿ ಸಣ್ಣ ಪುಟ್ಟ ದೇಶಗಳು ಹೆಚ್ಚು ಸಂಕಷ್ಟ ಅನುಭವಿಸುತ್ತಾರೆ. ಆದ್ದರಿಂದ ಶಾಂತಿ ಮತ್ತು ಸೌಹಾರ್ದತೆ ಉಳಿಸುವುದು ಅತ್ಯಂತ ಅಗತ್ಯವೆಂದರು.

ರೋಟರಿ ಮಾಜಿ ಡಿಸ್ಟ್ರಿಕ್ಟ್ ಗವರ್ನರ್ ರವಿ ವಾದ್ರಾಮಾನಿ ಮಾತನಾಡಿ, ಯುದ್ಧಗಳಿಂದ ಅಮಾಯಕರ ಜೀವಹಾನಿಯಾಗುತ್ತದೆ. ಆರ್ಥಿಕ ಸಂಕಷ್ಟ ಹಾಗೂ ಮಾನವೀಯ ಮೌಲ್ಯಗಳ ಹಾನಿ ಸಂಭವಿಸುತ್ತದೆ. ಶಾಂತಿಯೇ ಅಭಿವೃದ್ಧಿಗೆ ಮೂಲವಾಗಿದ್ದು, ಅದನ್ನು ಕಾಪಾಡುವುದು ಎಲ್ಲರ ಕರ್ತವ್ಯವೆಂದರು.

ರೊಟೋರಿಯನ್ ಬಸವರಾಜ ಧನ್ನೂರ ಮಾತನಾಡಿ, ಒಂಬತ್ತು ಶತಮಾನಗಳ ಹಿಂದೆ ಬಸವಣ್ಣನವರು ಯಾವುದೇ ಯುದ್ಧ ಬೇಡ ಎಂದು ಹೇಳಿ ಪ್ರತಿಯೊಂದು ಪ್ರಾಣಿ, ಪಕ್ಷಿ, ಜೀವಸಂಕುಲದ ಮೇಲೆ ದಯೆ ಇರಬೇಕು ಎಂದು ಹೇಳಿದ್ದರು. ಆದರೆ ಇವತ್ತು ಜಗತ್ತಿನಲ್ಲಿ ಎರಡು ದೇಶಗಳಲ್ಲಿ ನಡೆಯುತ್ತಿರುವ ಈ ಯುದ್ಧ ಜಗತ್ತಿನ ಸಾಕಷ್ಟು ಅಮಾಯಕರ ಮೇಲೆ ಪ್ರಭಾವ ಬೀರುತ್ತವೆ ಆದ್ದರಿಂದ ಈ ಬಸವಣ್ಣನ ನೆಲದಿಂದ ಜಗತ್ತಿಗೆ ಶಾಂತಿಯ ಸಂದೇಶವನ್ನು ನೀಡಬೇಕು ಎಂಬ ಉದ್ದೇಶದಿಂದ ಇಂದು ನಗರದಲ್ಲಿ ವಿಶ್ವಶಾಂತಿಗಾಗಿ ಶಾಂತಿಯುತ ನಡಿಗೆಯನ್ನು ಹಮ್ಮಿಕೊಳ್ಳಲಾಯಿತು ಎಂದು.

ಈ ಶಾಂತಿ ನಡಿಗೆಯಲ್ಲಿ ಶಾಹೀನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಅಬ್ದುಲ್ ಖದೀರ್, ರೋಟರಿ ಅಸಿಸ್ಟೆಂಟ್ ಗವರ್ನರ್ ಹಾವಶೆಟ್ಟಿ ಪಾಟೀಲ್, ನಿತೀನ್ ಕರ್ಪೂರ, ಬೀದರ್ ಜಿಲ್ಲೆಯ ಎಲ್ಲ ರೋಟರಿ ಕ್ಲಬ್ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು, ಸದಸ್ಯರು, ಶಾಹೀನ್ ಶಿಕ್ಷಣ ಸಂಸ್ಥೆಯ ಹಾಗೂ ಸೈನಿಕ ಶಾಲೆಯ ವಿದ್ಯಾರ್ಥಿಗಳು ಸೇರಿದಂತೆ ಅನೇಕರು ಭಾಗವಹಿಸಿ ಶಾಂತಿ ಸಂದೇಶ ಸಾರಿದರು.

# ದಸಾಪ ಕಲಬುರ್ಗಿ ವಿಭಾಗೀಯ ಸಂಯೋಜಕರಾಗಿ ಹೆಚ್.ಎಫ್.ಮಸ್ಕಿ ನೇಮಕ

ದಲಿತ ಸಾಹಿತ್ಯ ಪರಿಷತ್ತು (ರಿ) ರಾಜ್ಯ ಘಟಕದ ವತಿಯಿಂದ ಕಲ್ಬುರ್ಗಿ ವಿಭಾಗೀಯ ಸಂಯೋಜಕರಾಗಿ ಸಾಹಿತ್ತಿಕ ಹಾಗೂ ಸಂಘಟಕರಾದ ಸಿಂಧನೂರಿನ ಹೆಚ್.ಎಫ್.ಮಸ್ಕಿ ಅವರನ್ನು ನೇಮಕ ಮಾಡಲಾಗಿದೆ ಎಂದು ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಡಾ. ಅರ್ಜುನ್ ಗೊಳಸಂಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹೆಚ್.ಎಫ್.ಮಸ್ಕಿ ಅವರು 1960 ರಲ್ಲಿ ಹುನಗುಂದಾದಲ್ಲಿ ಜನಿಸಿದರು. ಬಡತನದಲ್ಲಿ ನೊಂದು ಬಂದು ಅಭ್ಯಾಸ ಮಾಡಿರುವ ಇವರು ನೌಕರಿ ನೌಕರಿಗಾಗಿ ಸಿಂಧನೂರಿನ ಶ್ರೀ ವೆಂಕಟೇಶ್ವರ ಪ್ರೌಢ ಶಾಲೆಗೆ ದೈಹಿಕ ಶಿಕ್ಷಕರಾಗಿ ನೇಮಕಗೊಂಡರು. ಹಲವಾರು ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರೆ. ಇವರು ಕನ್ನಡ ಸಾಹಿತ್ಯ ದಲಿತ ಮತ್ತು ಬಂಡಾಯ ಸಾಹಿತ್ಯ ಹಾಗೂ ಶರಣ ಸಾಹಿತ್ಯ ಸಾಂಸ್ಕೃತಿಕ ಚಿಂತನೆ ಮತ್ತು ಸಾಮಾಜಿಕ ಸೇವಾ ಕ್ಷೇತ್ರಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದು, ರಾಯಚೂರು ಜಿಲ್ಲೆಯಲ್ಲಿ ಉತ್ತಮ ಸಂಘಟಕರಾಗಿ ಗುರುತಿಸಿಕೊಂಡಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಕಹಳೆ ಮತ್ತು ಅಂತರಂಗ ಎನ್ನುವ ಎರಡು ಕಾವ್ಯ ಸಂಕಲನಗಳನ್ನು ಪ್ರಕಟಿಸಿದ್ದಾರೆ.

ಇವರ ಸಾಹಿತ್ಯ ಮತ್ತು ಸಾಮಾಜಿಕ ಸೇವೆಯನ್ನು ಗುರುತಿಸಿ ನವದೆಹಲಿಯಿಂದ ಅಂದಿನ ರಾಷ್ಟ್ರಪತಿಗಳಾಗಿದ್ದ ಶಂಕರ್ ದಯಾಳ್ ಶರ್ಮ ಅವರಿಂದ ಡಾ. ಬಿಆರ್ ಅಂಬೇಡ್ಕರ್ ಅವಾರ್ಡ್, ಭಾರತ ಸೇವಾದಳದ ಜಿಲ್ಲಾ ಪ್ರಶಸ್ತಿ, ಚಲವಾದಿ ಮತ್ತು ಮಾದಿಗ ನೌಕರರ ಸಂಘದ ವತಿಯಿಂದ ಜಿಲ್ಲಾಮಟ್ಟದ ಸೇವ ರತ್ನ ಪ್ರಶಸ್ತಿ, ತಾಲೂಕ ಮಟ್ಟದ ಉತ್ತಮ ಶಿಕ್ಷಕರ ರತ್ನ ಪ್ರಶಸ್ತಿ ಅಲ್ಲದೆ ಸರಕಾರ ಮತ್ತು ವಿವಿಧ ಸಂಘ ಸಂಸ್ಥೆಗಳಿಂದ ಗೌರವ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.ಚಲವಾದಿ ನೌಕರರ ಸಂಘದ ತಾಲೂಕ ಅಧ್ಯಕ್ಷರಾಗಿ ದಲಿತ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಪ್ರಸ್ತುತ ಸಿಂಧನೂರು ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹೂಗಾರ ಮತ್ತು ಡೆತ್ ಸರ್ಟಿಫಿಕೇಟ್ ಎಂಬ ಮೊದಲಾದ ಚಲನಚಿತ್ರದಲ್ಲಿ ಪೋಷಕ ನಟರ ಪಾತ್ರವನ್ನು ವಹಿಸಿದ್ದಾರೆ.

ಇವರ ಸಾಧನೆ ಹಾಗೂ ಸಂಘಟನಾ ಸಾಮರ್ಥ್ಯ ಹಾಗೂ ಸಾಹಿತಿಕ ಸೇವೆಯನ್ನು ಗಮನದಲ್ಲಿಟ್ಟುಕೊಂಡು ದಸಾಪ ರಾಜ್ಯ ಘಟಕದ ಪದಾಧಿಕಾರಿಗಳು ಚರ್ಚಿಸಿ ಈ ಮಹತ್ವದ ಜವಾಬ್ದಾರಿಯನ್ನು ವಹಿಸಿದ್ದಾರೆಂದು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಮುದನೂರು ಶಾಲೆಗೆ ನೂರಕ್ಕೆ ನೂರು ಫಲಿತಾಂಶ: ಸಾರ್ವಜನಿಕರಿಂದ ಶ್ಲಾಘನೆ

ವೀರಣ್ಣ ಕಲಕೇರಿ ಕೆಂಭಾವಿ

ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ಮುದನೂರು ಸರ್ಕಾರಿ ಪ್ರೌಢಶಾಲೆಯು ಈ ಬಾರಿಯ 2025-26 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅಭೂತಪೂರ್ವ ಸಾಧನೆ ಮಾಡಿದೆ. ಶಾಲೆಯು ಶೇ. 100 ರಷ್ಟು ಫಲಿತಾಂಶ ಪಡೆಯುವುದರ ಮೂಲಕ ದಾಖಲೆ ಮಾಡಿದೆ. ಜೊತೆಗೆ, ವಿದ್ಯಾರ್ಥಿನಿಯೊಬ್ಬಳು ಕನ್ನಡ ಭಾಷೆಯಲ್ಲಿ 125 ಕ್ಕೆ 125 ಅಂಕಗಳನ್ನು ಪಡೆದು ಗಮನ ಸೆಳೆದಿದ್ದಾಳೆ. ಶಾಲೆಯಿಂದ ಪರೀಕ್ಷೆಗೆ ಕುಳಿತಿದ್ದ ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆಯಾಗುವದರೊಂದಿಗೆ ಶಾಲೆಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳ ಶ್ರೇಣಿವಾರು ಫಲಿತಾಂಶ ನೋಡುವುದಾದರೆ ಆರತಿ ರಮೇಶ ಮತ್ತು ಪೂಜಾ ಬಸವರಾಜ್ ಇಬ್ಬರು ವಿದ್ಯಾರ್ಥಿಗಳು ಅಗ್ರ ಶ್ರೇಣಿಯಲ್ಲಿ ಪಾಸಾದರೆ, ಪ್ರಥಮ ಸ್ಥಾನದಲ್ಲಿ 10 ವಿದ್ಯಾರ್ಥಿಗಳು. ದ್ವಿತೀಯ ಸ್ಥಾನದಲ್ಲಿ 4 ವಿದ್ಯಾರ್ಥಿಗಳು ಹಾಗೂ ತೇರ್ಗಡೆ 7 ವಿದ್ಯಾರ್ಥಿಗಳು. ಹೀಗೆ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆಯಾಗುವುದರ ಮೂಲಕ ಶಾಲೆಯ 100 ಶೇ. ಫಲಿತಾಂಶ ಪಡೆಯುವಲ್ಲಿ ಯಶಸ್ಸು ತಂದಿದ್ದಾರೆ. ಆರತಿ ರಮೇಶ ಅಗ್ರ ಶ್ರೇಣಿಯೊಂದಿಗೆ ಕನ್ನಡ ವಿಷಯದಲ್ಲಿ 125 ಕ್ಕೆ 125 ಅಂಕ ಪಡೆದು ಸಾಧನೆ ಮಾಡಿದ್ದಾಳೆ.



**ನಮ್ಮೂರಿನ ಸರ್ಕಾರಿ ಶಾಲೆಯ ಈ ಅದ್ಭುತ ಫಲಿತಾಂಶವು ಅಲ್ಲಿನ ಶಿಕ್ಷಕ ವೃಂದದ ಶೈಕ್ಷಣಿಕ ಕಾಳಜಿ ಮತ್ತು ಕರ್ತವ್ಯನಿಷ್ಠೆಗೆ ಸಾಕ್ಷಿಯಾಗಿದೆ. ಈ ಸಾಧನೆಯು ಇತರ ಶಾಲೆಗಳಿಗೆ ಮಾದರಿಯಾಗಲಿ. ಬಡ ಮಕ್ಕಳ ಆರ್ಥಿಕ ಹೊರೆಯನ್ನು ತಗ್ಗಿಸುವ ನಿಟ್ಟಿನಲ್ಲಿ, ಎಲ್ಲಾ ಸರ್ಕಾರಿ ಶಾಲೆಗಳೂ ಇದೇ ರೀತಿ ಮೌಲ್ಯಯುತ ಶಿಕ್ಷಣಕ್ಕೆ ಒತ್ತು ನೀಡುವುದು ಇಂದಿನ ಅಗತ್ಯವಾಗಿದೆ.**

**ಶಾಂತಪ್ಪ ನಾಟಿಕಾರ್**

**ಗ್ರಾಮಸ್ಥರ ಸಂಭ್ರಮ**

**ಶಾಲೆಯ ಫಲಿತಾಂಶ ಹೊರಬೀಳುತ್ತಿದ್ದಂತೆ ನಮ್ಮೂರಿನ ಸರ್ಕಾರಿ ಶಾಲೆ ಇಂದು ಇಡೀ ತಾಲೂಕೇ ಮೆಚ್ಚುವಂತೆ ಸಾಧನೆ ಮಾಡಿದೆ" ಎಂದು ಪಾಲಕರು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ. ಮಕ್ಕಳ ಈ ಯಶಸ್ಸಿಗೆ ಕಾರಣರಾದ ಶಿಕ್ಷಕರಿಗೆ ಗೌರವ ಸೂಚಿಸಲು ಮುಂದಾಗಿ ಪಾಲಕರು ಸೇರಿದಂತೆ ಗ್ರಾಮಸ್ಥರು ಸ್ವಯಂಪ್ರೇರಿತರಾಗಿ ಬ್ಯಾನರ್‌ಗಳನ್ನು ಹಾಕಿ, ಸಿಹಿ ಹಂಚಿ ಸಂತಸವನ್ನು ಸಂಭ್ರಮಿಸುತ್ತಿದ್ದಾರೆ.**

**ವಿನೂತನ ಪ್ರಯೋಗ ಮತ್ತು ದತ್ತು ಯೋಜನೆ:**

ಈ ಶಾಲೆಯ ನೂರಕ್ಕೆ ನೂರು ಫಲಿತಾಂಶದ ಹಿಂದೆ ಶಿಕ್ಷಕರ ವಿನೂತನ ಶೈಕ್ಷಣಿಕ ಪ್ರಯೋಗಗಳಿವೆ. ಸರ್ಕಾರಿ ಆದೇಶಕ್ಕೂ ಮೊದಲೇ ವರ್ಷವಿಡೀ ಬೆಳಿಗ್ಗೆ ಮತ್ತು ಸಾಯಂಕಾಲ ವಿಶೇಷ ತರಗತಿಗಳನ್ನು ನಡೆಸಲಾಗಿತ್ತು. ಮುಖ್ಯವಾಗಿ, ಪ್ರತಿಯೊಬ್ಬ ಶಿಕ್ಷಕರು 6 ಮಕ್ಕಳನ್ನು ದತ್ತು ಪಡೆದು ಪ್ರತಿ ಮಗುವಿನ ಕಲಿಕಾ ಪ್ರಗತಿ ಪರಿಶೀಲನೆಯೊಂದಿಗೆ ಅವರ ಕಲಿಕೆಯ ಜವಾಬ್ದಾರಿಯನ್ನು ಹೊತ್ತು. ಪ್ರತಿ ಮಗುವಿನ ಕಲಿಕಾ ಮಟ್ಟವನ್ನು ಅರಿತು ಅವರಿಗೆ ಬೇಕಾದ ವಿಶೇಷ ಕಾಳಜಿಯನ್ನು ನೀಡಲಾಗಿತ್ತು ಎನ್ನುವ ಶಿಕ್ಷಕರು ವಾರಕ್ಕೊಮ್ಮೆ ರಸಪ್ರಶ್ನೆ ಹಾಗೂ ವಿಜ್ಞಾನದ ಚಿತ್ರಗಳನ್ನು ಸುಲಭವಾಗಿ ನೆನಪಿಟ್ಟುಕೊಳ್ಳಲು ರಂಗೋಲಿ ಸ್ಪರ್ಧೆಯಂತಹ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿತ್ತು. ಆಗಾಗ ವಿಷಯ ಪರಿಣಿತ ಸಂಪನ್ಮೂಲ ಶಿಕ್ಷಕ-ರಿಂದ ವಿಶೇಷ ಕ್ಲಾಸುಗಳು ಫಲಿತಾಂಶಕ್ಕೆ ಸಹಕಾರಿಯಾಗಿದೆ ಎನ್ನುತ್ತಾರೆ ಇಲ್ಲಿನ ಶಿಕ್ಷಕರು.

ಸಮುದಾಯದ ಬೆಂಬಲ ಈ ಶಾಲೆಯ ಎಸ್.ಡಿ.ಎಮ್.ಸಿ ಹಾಗೂ ಪಾಲಕರು ಪೂರ್ಣ ಸಹಕಾರ ಹಾಗೂ ನಮ್ಮ ಶಿಕ್ಷಕರ ಸಮರ್ಪಣೆ ಕಾರ್ಯ, ಅವರ ಶ್ರಮಕ್ಕೆ ಈ ಸಾಧನೆ ಸಾಧ್ಯವಾಗಿದೆ ಎನ್ನುತ್ತಾರೆ ಶಾಲಾ ಮುಖ್ಯ ಗುರು ಎಮ್.ಬಿ ಪಾಟೀಲ್. ಒಟ್ಟಿನಲ್ಲಿ ಗ್ರಾಮೀಣ ಭಾಗದ ಸರ್ಕಾರಿ ಶಾಲೆಯ ಈ ಸಾಧನೆಗೆ ಸಾರ್ವಜನಿಕರಿಂದ ಶ್ಲಾಘನೆ ವ್ಯಕ್ತವಾಗುತ್ತಿದೆ.



**ಪೂಜಾ ಬಸವರಾಜ್**
**625ಕ್ಕೆ 583 93%**



**ಆರತಿ ರಮೇಶ**
**625ಕ್ಕೆ 572 (92%)**

# ತಡೋಳಾ ಗುರುಕುಲ ಶಾಲೆಯ ವಿದ್ಯಾರ್ಥಿ ತಾಲೂಕಿಗೆ ಪ್ರಥಮ







ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ತಾಲೂಕಿನ ತಡೋಳಾ ಗ್ರಾಮದ ಶ್ರೀ ಶಿವಯೋಗಿ ಸಿದ್ದವೀರ ಸ್ವಾಮಿ ಗುರುಕುಲ ಶಾಲೆಯ ವಿದ್ಯಾರ್ಥಿಯಾದ ಕು.ಓಂಕಾರ ಶಿವರಾಜ 617/625 (98.73%) ಅಂಶಗಳೊಂದಿಗೆ ತೇ-ೀರ್ಗಡೆಯಾಗಿ ತಾಲೂಕಿಗೆ ಪ್ರಥಮ ಸ್ಥಾನ ಹಾಗೂ ರಾಜ್ಯದಲ್ಲಿ 8 ನೆ ರ್‍ಯಾಂಕ ಪಡೆದಿರುತ್ತಾನೆ. ಅದರಂತೆ ಕಲ್ಪನಾ 93.65%. ನವೀನ 90.40. ಉತ್ತಮವಾದ ಫಲಿತಾಂಶ ನೀಡಿರುತ್ತಾರೆ. ಒಟ್ಟು ಶಾಲೆಯಲ್ಲಿ 43 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ. ಅದರಲ್ಲಿ ಡಿಸ್ಟಿಂಕ್ಷನ 06, ಪ್ರಥಮ ಶ್ರೇಣಿಯಲ್ಲಿ, 25 ದ್ವಿತಿಯ ಶ್ರೇಣಿಯಲ್ಲಿ 08', ತೃತೀಯ ಶ್ರೇಣಿಯಲ್ಲಿ 04, ಈ ಫಲಿತಾಂಶವನ್ನು ಕೊಟ್ಟ ಎಲ್ಲಾ ವಿದ್ಯಾರ್ಥಿಗಳಿಗೂ ಹಾಗು ಶಿಕ್ಷಕರಿಗೆ ಸಂಸ್ಥೆಯ ಅಧ್ಯಕ್ಷರಾದ ಪೂಜ್ಯಶ್ರೀ ಷ.ಬ್ರ.ರಾಜೇಶ್ವರ ಶಿವಾಚಾರ್ಯರು ಹಾಗೂ ಕಾರ್ಯದರ್ಶಿಗಳಾದ ಗುರುಶಾಂತ ಹಿರೇಮಠ ಮತ್ತು ಮುಖ್ಯಗುರುಗಳಾದ ಓಂಕಾರೇಶ್ವರ ವಿಶ್ವನಾಥಮಠ ರವರು ಅಭಿನಂದನೆ ಸಲ್ಲಿಸಿದ್ದಾರೆ.

# ಅಲಗೂಡ ಸರ್ಕಾರಿ ಪ್ರೌಢ ಶಾಲೆಗೆ ಎಸ್. ಎಸ್. ಎಲ್. ಸಿ. ಫಲಿತಾಂಶ ಶೇ 100







ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

:-ತಾಲೂಕಿನ ಅಲಗೂಡ ಸರಕಾರಿ ಪ್ರೌಢ ಶಾಲೆಗೆ ಎಸ್. ಎಸ್. ಎಲ್. ಸಿ. ಫಲಿತಾಂಶ ಶೇ. 100ರಷ್ಟು ಬಂದಿರುತ್ತದೆ. ಅತಿ ಹೆಚ್ಚಿನ ಅಂಕ ಪಡೆದು ಟಾಪರ ವಿದ್ಯಾರ್ಥಿಗಳಾದ ಪ್ರಥಮ ಪ್ರಾಚಿ ಗೋಪಾಳ 89-12. ದ್ವಿತೀಯ ಅಭಿಜಿತ ರವಿ 87.20. ತೃತೀಯ ಭೂಮಿಕಾ ಗಂಗಾಧರ. 86.24/. ರಷ್ಟು ಶೇ. ಅಂಕ ಪಡೆದಿ ರುತ್ತಾರೆ. ಶಿಕ್ಷಕರಾದ ನಾಗಪ್ಪ ನಿಣ್ಣೆ ಭೋದಿಸುವ ಹಿಂಧಿ ವಿಷಯ ದಲ್ಲಿ ಪ್ರಾಚಿ ಹಾಗೂ ಅಭಿಜೀತ್ 100/ಅಂಕ ಪಡೆದಿರುವುದು ವಿಶೇಷ. ಶಾಲೆಯ ಮುಖ್ಯ ಗುರುಗಳಾದ ರಮೇಶ ರಾಜೋಳೆ. ಎಸ್ ಡಿ. ಎಂ. ಸಿ. ಅಧ್ಯಕ್ಷರು ಹಾಗೂ ಸದ್ಯಸರು ಶಿಕ್ಷಕ ಸಿಬ್ಬಂದಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಶುಭಾಶಯಗಳುಕೋ ರಿದ್ದಾರೆ.

# ವಿಕ್ರಮಪುರ ಓದುಗರ ಬಳಗ: ಓದು-ಚಿಂತನೆಗೆ ಸಾಹಿತ್ಯಾಸಕ್ತರಲ್ಲಿ ಹೊಸ ದಿಕ್ಕು

ಮಲ್ಲಮ್ಮ ನುಡಿ ವಾರ್ತೆ, ಹುಣಸಗಿ:

ತಾಲ್ಲೂಕಿನ ವಿಕ್ರಮಪುರ ಓದುಗರ ಬಳಗದ ವತಿಯಿಂದ ಶನಿವಾರ ಸರಕಾರಿ ಬಾಲಕಿಯರ ಪ್ರೌಢ ಶಾಲೆಯಲ್ಲಿ ಜ್ಞಾನವರ್ಧಕ ಹಾಗೂ ಚಿಂತನಾತ್ಮಕ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಸಾಹಿತ್ಯಾಸಕ್ತರು ಒಂದು ಪುಸ್ತಕವನ್ನು ಓದಿ ಅದರ ವಿಷಯವನ್ನು ಅವಲೋಕಿಸಿ, ಅದರ ವಿಶೇಷತೆಗಳನ್ನು ಪರಸ್ಪರ ಹಂಚಿಕೊಳ್ಳುವ ಮೂಲಕ ಓದುವ ಅಭ್ಯಾಸವನ್ನು ವೃದ್ಧಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಈ ಮೂಲಕ ಸಾಹಿತ್ಯಾಸಕ್ತರಲ್ಲಿ ಚಿಂತನಾ ಶಕ್ತಿ ಹಾಗೂ ಸಾಹಿತ್ಯದ ಮೆಲುಕು ಹಾಕುವ ಅಭ್ಯಾಸ ಬೆಳೆಸುವ ಪ್ರಯತ್ನ ನಡೆಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಹೇಶ ಸ್ಥಾವರ ಮಠ, ಓದುಗರಲ್ಲಿ ಕಲ್ಪನೆ ಹಾಗೂ ಚಿಂತನೆಗಳನ್ನು ಬೆಳೆಸುವಲ್ಲಿ ಇಂತಹ ಕಾರ್ಯಕ್ರಮಗಳು ಪ್ರಮುಖ ಪಾತ್ರವಹಿಸುತ್ತವೆ ಎಂದರು. ಯಾವುದೇ ಆಡಂಬರವಿಲ್ಲದೆ, ಮುಕ್ತ ಮನಸ್ಸಿನಿಂದ ಕಡಿಮೆ ಸಮಯದಲ್ಲಿ ಒಂದು ಕೃತಿಯನ್ನು ಸಂಪೂರ್ಣವಾಗಿ ಓದಿ, ಅದರಲ್ಲಿರುವ ಸಾಹಿತ್ಯ, ಇತಿಹಾಸ, ಸಂಸ್ಕೃತಿ, ನಡೆ-ನುಡಿ ಹಾಗೂ ಭಾಷೆಯ ಅಂಶಗಳನ್ನು ತಿಳಿದುಕೊಳ್ಳಲು ಈ ಕಾರ್ಯಕ್ರಮ ಸಹಕಾರಿ ಎಂದು ವಿವರಿಸಿದರು.



ಮುಖ್ಯಅತಿಥಿಗಳಾಗಿ ಭಾಗವಹಿಸಿದ ಗುರನಗೌಡ ಹೊರಗಿನಮನಿ ಹಾಗೂ ರೇವಣಸಿದ್ದಯ್ಯ ಹಿರೇಮಠ ಅವರು ಉಪನ್ಯಾಸ ನೀಡಿ, ಪ್ರತಿಯೊಬ್ಬ ವ್ಯಕ್ತಿಯೂ ವಿಭಿನ್ನವಾಗಿದ್ದು, ಅಧ್ಯಾತ್ಮಜ್ಞಾನ ಹೊಂದಿದವನು ಜೀವನದ ವಿವಿಧ ಕ್ಷೇತ್ರಗಳಲ್ಲಿ ಜ್ಞಾನವನ್ನು ಅರಿಯುವ ಸಾಮರ್ಥ್ಯ ಹೊಂದಿರುತ್ತಾನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿವಿಧ ಕೃತಿಗಳ ಅವಲೋಕನ ನಡೆಯಿತು. ಬಸನಗೌಡ ಪೊಲೀಸ್ ಪಾಟೀಲ್ ಅವರು ಸುರಪುರ ಶಾಸನಗಳ ಕುರಿತು ಮಾತನಾಡಿ, ಇವು ಸಮಾಜದ ಚಿಂತನೆಗೆ ಮಹತ್ವದ ದಿಕ್ಕು ತೋರಿಸುತ್ತವೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಅಕ್ಕಮಹಾದೇವಿ ದೇಸಮುಖ ನಿರೂಪಿಸಿದರು. ವಂದನಾರ್ಪಣೆಯನ್ನು ವಿರೇಶ ಹಡಪದ ಸಲ್ಲಿಸಿದರು.

ಈ ಸಂದರ್ಭದಲ್ಲಿ ಡಾ. ಬಸವರಾಜ ಚಂದಾ ಶಿವಕುಮಾರ ಬಂಡೋಳಿ, ನಾಗನಗೌಡ ಪಾಟೀಲ, ಬಸವರಾಜ ತೆಗ್ಗಳ್ಳಿ, ಯಂಕನಗೌಡ ಅರಕೇರಿ, ವೆಂಕಗಿರಿ ದೇಶಪಾಂಡೆ, ರಾಘವೇಂದ್ರ ಪಾಪುಗೌಡ ಮೇಟಿ, ಬಸವರಾಜ ಮಾರೋಳ, ಮೌನೇಶ ಜಾಗಿರಧಾರ, ಮಹಾದೇವಿ ಬೇವಿನಾಳಮಠ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕಂಪ್ಲಿಯಲ್ಲಿ ನೂತನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಉದ್ಘಾಟನೆ

## ಜನರ ಹಿತರಕ್ಷಣೆ, ಹಕ್ಕುಗಳಿಗಾಗಿ ನ್ಯಾಯಾಲಯ: ನ್ಯಾ.ಆರ್.ನಟರಾಜ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜನರ ಹಿತರಕ್ಷಣೆ ಹಾಗೂ ಹಕ್ಕುಗಳನ್ನು ಒದಗಿಸಿಕೊಡುವ ಜೊತೆಗೆ ಸಕಾಲದಲ್ಲಿ ಜನತೆಗೆ ನ್ಯಾಯ ಒದಗಿಸಿಕೊಡುವುದು ನ್ಯಾಯಾಲಯದ ಮುಖ್ಯ ಉದ್ದೇಶವಾಗಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಆಡಳಿತಾತ್ಮಕ ನ್ಯಾಯಾಧೀಶರಾದ ಆರ್.ನಟರಾಜ ಅವರು ಹೇಳಿದರು.

ಕಂಪ್ಲಿ ಪಟ್ಟಣದ 20ನೇ ವಾರ್ಡಿನ ಶಿಬಿರದಿನ್ನಿ (ಮಾರುತಿನಗರ)ಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ನೂತನ ಸಿವಿಎಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಉದ್ಘಾಟಿಸಿ ಅವರು ಮಾತನಾಡಿದರು.

ಜನರು ಕೇಸ್ ವಿಚಾರಣೆಗಾಗಿ ಕಂಪ್ಲಿಯಿಂದ ದೂರದ ಬಳ್ಳಾರಿ ಕೋರ್ಟ್‌ಗೆ ಹೋಗಬೇಕಾಗಿತ್ತು. ಕಂಪ್ಲಿಯಲ್ಲಿ ಕೋರ್ಟ್ ಆಗದಿದ್ದರೆ, ಅಪೂರ್ಣವಾಗುತ್ತಿತ್ತು. ಕೋರ್ಟ್ ಸ್ಥಾಪನೆಯೊಂದಿಗೆ ಹೂ ಅರಳಿದಂತಾಗಿದೆ ಎಂದು ತಿಳಿಸಿದರು.

ಇಲ್ಲಿನ ಜನರು ಹಕ್ಕು ಭಾದಿತರಾಗಿದ್ದಾರೆ. ಇಲ್ಲಿನ ಜನತೆಗೆ ಕೋರ್ಟ್ ಅತ್ಯವಶ್ಯಕವಾಗಿದೆ. ಇಲ್ಲಿನ ಪುರಸಭೆಗೆ ಒಳಪಡುವ ಕಟ್ಟಡದಲ್ಲಿ ಕೋರ್ಟ್‌ಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಇಲ್ಲಿನ ನಗದಿತ ಸ್ಥಳದಲ್ಲಿರುವ ಕಟ್ಟಡಕ್ಕೆ ಹೊಸ ರೂಪುರೇಷೆ ನೀಡಲಾಗುತ್ತದೆ. ಸರ್ಕಾರ ಅನುಮತಿ ನೀಡಿದರೆ, ಭವ್ಯ ಕಟ್ಟಡ ಮಾಡಲಿದ್ದೇವೆ ಎಂದರು.

ಉತ್ತಮ ಸ್ಥಳದಲ್ಲಿ ಕೋರ್ಟ್ ಸ್ಥಾಪಿತವಾಗಬೇಕಾಗಿತ್ತು. ಆದರೆ, ಇಲ್ಲಿನ ಇಕ್ಕಟ್ಟಿನ ಸ್ಥಳದಲ್ಲಿ ಹಾಗೂ ಜನರು ಬಾರದ ಸ್ಥಳದಲ್ಲಿ ಕೋರ್ಟ್ ಕಟ್ಟಡ ನೀಡಿರುವುದು ಅಸಮಾಧಾನವಿದೆ. ಇಲ್ಲಿನ ಕೋರ್ಟ್ ಸಾಕಾಗಲ್ಲ. ಇಲ್ಲಿ 63 ಜನ ವಕೀಲರಿದ್ದು, ಒಂದು ಸಾವಿರ ಕೇಸ್ ಇರುತ್ತಿದ್ದವು. ಈಗ ಕಂಪ್ಲಿಯಲ್ಲೇ ನ್ಯಾಯಾಲಯ ಸ್ಥಾಪಿತವಾಗಿದೆ. ಇದರಿಂದ ಈ ಭಾಗದ ಜನರು ನ್ಯಾಯ ಪಡೆಯುವ ಜೊತೆಗೆ ಸೌಲಭ್ಯಗಳನ್ನು ಪಡೆದುಕೊಳ್ಳಲಿದ್ದಾರೆ. ಜನರ ಹಿತರಕ್ಷಣೆ ಹಾಗೂ ಜನರು ತಮ್ಮ ಹಕ್ಕುಗಳನ್ನು ಪಡೆದು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದಾರೆ ಎಂದರು.



ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಸದಸ್ಯ ಅನೀಲ್ ಕುಮಾರ್ ಅವರು ಮಾತನಾಡಿ, ಕಂಪ್ಲಿಯಲ್ಲಿ ಈಗ ನ್ಯಾಯಾಲಯ ಸ್ಥಾಪನೆಗೊಂಡಿದೆ. ಕಂಪ್ಲಿ ಬಳಿಯಲ್ಲಿ ಮೀಸಲಿಸಿರುವ 3.12 ಎಕರೆ ಜಾಗದಲ್ಲಿ ಸುಮಾರು 25 ಕೋಟಿ ರೂ. ಅನುದಾನ ಮಂಜೂರು ಮಾಡಿಸಿ, ಭವ್ಯ ಕಟ್ಟಡ ನಿರ್ಮಿಸಿಕೊಡುವ ಭರವಸೆಯನ್ನು ಶಾಸಕ ಜೆ.ಎನ್.ಗಣೇಶ ನೀಡಿದ್ದಾರೆ. ಸಕಾಲದಲ್ಲಿ ಕಕ್ಷಿದಾರರಿಗೆ ನ್ಯಾಯ ಒದಗಿಸಿಕೊಡುವ ನಿಟ್ಟಿನಲ್ಲಿ ವಕೀಲರು ಮುಂದಾಗಬೇಕು ಎಂದರು.

ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಜಿ.ಶಾಂತಿ, ಎಸ್.ಇಸ್ಮಾಯಿಲ್ ಜಬಿವುಲ್ಲಾ, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯ ಜೆ.ಎಂ.ಅನಿಲ್ ಕುಮಾರ, ಲೋಕೋಪಯೋಗಿ ಇಇಬಿ.ವಿಜಯ ಭಾಸ್ಕರ್, ವಕೀಲರಾದ ಪ್ರಭಾಕರ, ಹರೀಶ್, ರುದ್ರಪ್ಪ, ಶಿವಪ್ಪ, ಯಂಕಪ್ಪ, ನಟರಾಜ, ಹುಲುಗಪ್ಪ, ವೀರಣ್ಣ, ಮಾರುತಿಸಿಂಗ್, ಮೋಹನ್‌ಕುಮಾರ್ ದಾನಪ್ಪ, ಮುಂಖಡರಾದ ಕೆ.ಎಂ. ಹೇಮಯ್ಯಸ್ವಾಮಿ, ಹೊಸಕೋಟೆ ಜಗದೀಶ, ಜಿ.ರಾಮಣ್ಣ, ಬಿ.ಸಿದ್ದಪ್ಪ ಸೇರಿದಂತೆ ಅನೇಕರಿದ್ದರು.


# ಮೇ ತಿಂಗಳಲ್ಲಿ ಪ್ಯಾನ್–ಐಐಟಿ ಬೆಂಗಳೂರು ಸಮಿಟ್ 2026

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಪ್ಯಾನ್ ಐಐಟಿ ಅಲ್ಯೂಮ್ನಿ ಇಂಡಿಯಾ ಅಸೋಸಿಯೇಷನ್ ಮತ್ತು ಕರ್ನಾಟಕ ಸರ್ಕಾರದ ಸಹಯೋಗದಲ್ಲಿ, ಮೇ 16ರಂದು ಬೆಂಗಳೂರಿನಲ್ಲಿ "ಪ್ಯಾನ್–ಐಐಟಿ ಬೆಂಗಳೂರು ಸಮಿಟ್ 2026" ಆಯೋಜಿಸಲಾಗಿದೆ.

"ತಂತ್ರಜ್ಞಾನದಲ್ಲಿನ ಸ್ವಾಯತ್ತತೆ" ಎಂಬ ವಿಷಯದಡಿ ಈ ಸಮಿಟ್ ನಡೆಯಲಿದೆ ಎಂದು ಕರ್ನಾಟಕ ಸರ್ಕಾರದ ಇ–ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ಅವರು ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ, ವಿಶೇಷವಾಗಿ ಬೆಂಗಳೂರು, ಇಂದು ಭಾರತದ ತಂತ್ರಜ್ಞಾನ ಮಹತ್ವಾಕಾಂಕ್ಷೆಯ ಕೇಂದ್ರಬಿಂದುವಾಗಿ ಹೊರಹೊಮ್ಮಿದೆ. ದೇಶದ ಪ್ರಮುಖ ಜಿಡಿಪಿ ಕೊಡುಗೆ ನೀಡುವ ನಗರಗಳಲ್ಲಿ ಬೆಂಗಳೂರು ಒಂದಾಗಿದ್ದು, ವೆಂಚರ್ ಕ್ಯಾಪಿಟಲ್ ಹೂಡಿಕೆಗಳ ಪ್ರಮುಖ ಕೇಂದ್ರವಾಗಿಯೂ ಗುರುತಿಸಿಕೊಂಡಿದೆ. ಸ್ಟಾರ್ಟ್‌ಅಪ್‌ಗಳ ನಿಧಿ ಸಂಗ್ರಹ ಹಾಗೂ ನವೀನ ಚಟುವಟಿಕೆಗಳಲ್ಲಿ ಮಹತ್ತರ ಪಾತ್ರವಹಿಸಿರುವುದು, ಸಾವಿರಾರು ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ವಿಶ್ವದ ಅತಿ ದೊಡ್ಡ ಪ್ರತಿಭಾ ಸಂಪನ್ಮೂಲಗಳಲ್ಲಿ ಒಂದನ್ನು ಹೊಂದಿರುವುದು ಈ ಎಲ್ಲ ಕಾರಣಗಳಿಂದ ಬೆಂಗಳೂರು "ಪೂರ್ವದ ಸಿಲಿಕಾನ್ ವ್ಯಾಲಿ" ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಅವರು ಹೇಳಿದರು.



ಸಾರ್ವಜನಿಕ ವಲಯ ಮತ್ತು ತಾಂತ್ರಿಕ ಕಂಪನಿಗಳ ಮೂಲಕ ಏರೋಸ್ಪೇಸ್, ರಕ್ಷಣಾ ಹಾಗೂ ಮೂಲ ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಕರ್ನಾಟಕವು ಬಲವಾದ ನೆಲೆ ನಿರ್ಮಿಸಿತು. ಬಳಿಕ ಇನ್ಫೋಸಿಸ್, ಟಿಸಿಎಸ್, ಎಚ್‌ಸಿಎಲ್ ಮತ್ತು ವಿಪ್ರೋ ಮುಂತಾದ ಐಟಿ ದಿಗ್ಗಜಗಳ ಉದಯದೊಂದಿಗೆ ಭಾರತವನ್ನು ಜಾಗತಿಕ ತಂತ್ರಜ್ಞಾನ ನಕ್ಷೆಯಲ್ಲಿ ಸ್ಥಾಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ ಎಂದು ಅವರು ವಿವರಿಸಿದರು.

ಪ್ರಸ್ತುತ ದೇಶವು ಡೀಪ್ ಟೆಕ್, ಕೃತಕ ಬುದ್ಧಿಮತ್ತೆ ಮತ್ತು ವೈಜ್ಞಾನಿಕ ನವೀನತೆಯ ಹಂತಕ್ಕೆ ಸಾಗುತ್ತಿದೆ. ಈ ಹಂತದಲ್ಲಿ ಅಕಾಡೆಮಿಯಾ, ಕೈಗಾರಿಕೆ ಮತ್ತು ಸರ್ಕಾರಗಳ ನಡುವಿನ ಗಟ್ಟಿಯಾದ ಸಹಕಾರ ಅತ್ಯವಶ್ಯಕವಾಗಿದೆ. ತಂತ್ರಜ್ಞಾನ ಸ್ವಾಯತ್ತತೆಯನ್ನು ಸಾಧಿಸಲು ಇದು ಪ್ರಮುಖ ಹಂತವಾಗಿದ್ದು, ಈ ಹಿನ್ನೆಲೆಯಲ್ಲಿ ಪ್ಯಾನ್–ಐಐಟಿ ಬೆಂಗಳೂರು ಸಮಿಟ್ 2026 ರೂಪುಗೊಂಡಿದೆ ಎಂದು ತಿಳಿಸಿದರು.

ಪ್ಯಾನ್ ಐಐಟಿ ಅಧ್ಯಕ್ಷರಾದ ಪ್ರಭಾತ್ ಕುಮಾರ್ (ಐ.ಆರ್.ಎಸ್) ಅವರು ಮಾತನಾಡಿ, ಸಮಿಟ್‌ನಲ್ಲಿ ಉನ್ನತ ಮಟ್ಟದ ಪ್ಲೀನರಿ ಸೆಷನ್‌ಗಳು, ಆಳವಾದ ಪ್ಯಾನೆಲ್ ಚರ್ಚೆಗಳು ಹಾಗೂ ಎಐ, ರಕ್ಷಣಾ, ಸೆಮಿಕಂಡಕ್ಟರ್, ಇಂಧನ, ಮೊಬೈಲಿಟಿ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಸಮಾಂತರ ಚರ್ಚೆಗಳು ನಡೆಯಲಿವೆ ಎಂದು ಹೇಳಿದರು.

ಆಯ್ದ ಪಿಚ್–ಹ್ಯಾಕಥಾನ್ ಮೂಲಕ ಹೆಚ್ಚಿನ ಸಾಧ್ಯತೆ ಹೊಂದಿರುವ ಸ್ಟಾರ್ಟ್‌ಅಪ್‌ಗಳನ್ನು 200ಕ್ಕೂ ಹೆಚ್ಚು ವೆಂಚರ್ ಕ್ಯಾಪಿಟಲಿಸ್ಟ್‌ಗಳೊಂದಿಗೆ ಸಂಪರ್ಕಿಸಲಾಗುವುದು. ಜೊತೆಗೆ, 10,000 ಮಂದಿ ಭಾಗವಹಿಸುವ ಹ್ಯಾಕಥಾನ್‌ನಲ್ಲಿ ಕರ್ನಾಟಕ ಸರ್ಕಾರ ನೀಡಿದ ನೈಜ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯಲಾಗುವುದು ಎಂದರು.

ಭಾರತವು ಜಾಗತಿಕ ತಂತ್ರಜ್ಞಾನ ಸ್ಪರ್ಧೆಯಲ್ಲಿ ಮುನ್ನಡೆಯಲು ಆಳವಾದ ವಿಜ್ಞಾನ ಮತ್ತು ಮೂಲ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುವ ಅಗತ್ಯವಿದೆ. ಪ್ಯಾನ್ ಐಐಟಿ ಸಮುದಾಯವು ಅಪಾರ ಬೌದ್ಧಿಕ ಸಂಪತ್ತು ಮತ್ತು ಜಾಗತಿಕ ಪ್ರಭಾವ ಹೊಂದಿರುವುದರಿಂದ, ಈ ಸಮಿಟ್ ರಾಷ್ಟ್ರೀಯ ಆದ್ಯತೆಗಳನ್ನು ಜಾಗತಿಕ ಆಶಯಗಳೊಂದಿಗೆ ಹೊಂದಿಸಲು ವೇದಿಕೆಯಾಗಲಿದೆ ಎಂದು ಅವರು ಹೇಳಿದರು.

23 ಐಐಟಿಗಳ 5 ಲಕ್ಷಕ್ಕೂ ಹೆಚ್ಚು ಅಲ್ಯೂಮ್ನಿಗಳ ಸಂಯುಕ್ತ ಚಿಂತನೆಯ ಫಲವಾಗಿರುವ ಈ ಸಮಿಟ್, ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ, ವ್ಯವಹಾರ ಮತ್ತು ನೀತಿ ರೂಪಣೆಯಲ್ಲಿ ಸಕ್ರಿಯ ಸಮುದಾಯವನ್ನು ಒಂದೇ ವೇದಿಕೆಗೆ ತರಲಿದೆ. ನವೀನತೆ, ಉದ್ಯಮಶೀಲತೆ ಮತ್ತು ರಾಷ್ಟ್ರನಿರ್ಮಾಣದ ಮುಂದಿನ ಹಂತವನ್ನು ಉತ್ತೇಜಿಸುವ ದಿಕ್ಕಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.

ದಿನಪೂರ್ತಿ ನಡೆಯುವ ಈ ಸಮಿಟ್‌ನಲ್ಲಿ ಮುಖ್ಯ ಭಾಷಣಗಳು, ಪ್ಯಾನೆಲ್ ಚರ್ಚೆಗಳು, ರೌಂಡ್‌ಟೇಬಲ್, ಅಗ್ರಗಣ್ಯ ಸ್ಟಾರ್ಟ್‌ಅಪ್‌ಗಳ ಪ್ರದರ್ಶನ, ಹ್ಯಾಕಥಾನ್ ಹಾಗೂ ಇನೋವೇಶನ್ ಪ್ರದರ್ಶನಗಳು ನಡೆಯಲಿವೆ.

ಈ ಸಮಿಟ್‌ನಲ್ಲಿ ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕರಾದ ಗುರುದೇವ ಶ್ರೀ ಶ್ರೀ ರವಿ ಶಂಕರ್, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಭಾರತ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ಡಾ. ವಿ. ಅನಂತ ನಾಗೇಶ್ವರನ್, ಎಎನ್‌ಆರ್‌ಎಫ್ ಸಿಇಒ ಶಿವಕುಮಾರ್ ಕಲ್ಯಾಣರಾಮನ್, ಇಂಡಿಯಾ ಎಐ ಮಿಷನ್‌ನ ಮಾಜಿ ಸಿಇಒ ಅಭಿಷೇಕ್ ಸಿಂಗ್, ತೇಜಸ್ ವಿಮಾನದ ಮುಖ್ಯ ವಿನ್ಯಾಸಕರಾದ ಡಾ. ಕೋಟಾ ಹರಿನಾರಾಯಣ, ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಇಂಧನ) ಗೌರವ್ ಗುಪ್ತಾ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ನಗರಾಭಿವೃದ್ಧಿ ಮತ್ತು ಗೃಹ) ತುಷಾರ್ ಗಿರಿ ನಾಥ್, ಇ–ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ, ಟ್ಯಾಲಿ ಸೊಲ್ಯೂಶನ್ಸ್ ಸಂಸ್ಥಾಪಕರಾದ ಭಾರತ್ ಗೋಯಂಕಾ, ಮೈಕ್ರೋಸಾಫ್ಟ್ ರಿಸರ್ಚ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕರಾದ ವೆಂಕಟ್ ಪದ್ಮನಾಭನ್, ಮೀಶೋ ಸಹ ಸಂಸ್ಥಾಪಕ ಹಾಗೂ ಸಿಇಒ ವಿಧಿತ್ ಆತ್ರೇಯ್, ಗ್ರೋವ್ ಸಹ ಸಂಸ್ಥಾಪಕ ಹಾಗೂ ಸಿಒಒ ಹರ್ಷ್ ಜೈನ್, ಅಥರ್ ಎನರ್ಜಿ ಸಹ ಸಂಸ್ಥಾಪಕ ಹಾಗೂ ಸಿಇಒ ತರುಣ್ ಮೆಹ್ತಾ, ಸ್ವಿಗ್ಗಿ ಸಹ ಸಂಸ್ಥಾಪಕ ಫಣಿ ಕಿಶನ್ ಅಡ್ಡೆಪಳ್ಳಿ, ಪಿಡಬ್ಲ್ಯೂಸಿ ಗ್ಲೋಬಲ್ ಕ್ಯಾಪೆಬಿಲಿಟಿ ಸೆಂಟರ್ ಮುಖ್ಯಸ್ಥ ರಾಜೇಶ್ ಓಜಾ ಹಾಗೂ ಎ□□□ಪಿ ಗ್ಲೋಬಲ್ ಡೆಲಿವರಿ ಮುಖ್ಯಸ್ಥ ರಜನೀಶ್ ಪ್ರಸಾದ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ

## ಚಿಕ್ಕ ಸಿಂದೋಗಿ, ಮಂಗಳಾಪುರದಲ್ಲಿ ಮಕ್ಕಳ ಅಪೌಷ್ಟಿಕತೆ ನಿವಾರಣೆ ಕುರಿತು ಜಾಗೃತಿ ಕಾರ್ಯಕ್ರಮ



ಮಲ್ಲಮ್ಮ ನುಡಿವಾರ್ತೆ ಕೊಪ್ಪಳ:

ತಾಲೂಕಿನ ಚಿಕ್ಕ ಸಿಂದೋಗಿ ಮತ್ತು ಮಂಗಳಾಪುರ ಗ್ರಾಮಗಳಲ್ಲಿ ಇಂದು ಸಂಪರ್ಕ ಸಂಸ್ಥೆಯು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಜನರಿಗೆ ಮಕ್ಕಳ ಅಪೌಷ್ಟಿಕತೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಸಂಪರ್ಕ ಸಂಸ್ಥೆಯ ಯೋಜನಾ ವ್ಯವಸ್ಥಾಪಕರಾದ ಶ್ರೀ ಅನು ನಿಟ್ಟೂರು ಅವರು ಸುಮಾರು ಒಂದು ಗಂಟೆ ಕಾಲ 70 ರಿಂದ 80 ಗ್ರಾಮಸ್ಥರೊಂದಿಗೆ ಸಂವಾದ ನಡೆಸಿದರು. ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಪೌಷ್ಟಿಕತೆಯೆಡೆಗೆ ಕೊಂಡೊಯ್ಯಲು ಅನುಸರಿಸಬೇಕಾದ ಸಮತೋಲಿತ ಆಹಾರಕ್ರಮ, ದಿನನಿತ್ಯದ ಜೀವನಶೈಲಿಯಲ್ಲಿ ತರಬೇಕಾದ ಅಗತ್ಯ ಬದಲಾವಣೆಗಳು ಹಾಗೂ ಮಕ್ಕಳ ಆರೋಗ್ಯ ಕಾಪಾಡುವಲ್ಲಿ ಪರಿಸರ ಮತ್ತು ವೈಯಕ್ತಿಕ ಸ್ವಚ್ಛತೆಯ ಮಹತ್ವದ ಬಗ್ಗೆ ಅವರು ವಿವರವಾಗಿ ತಿಳಿಸಿಕೊಟ್ಟರು. ಸ್ಥಳೀಯವಾಗಿ ಲಭ್ಯವಿರುವ ಸಿರಿಧಾನ್ಯ, ಸೊಪ್ಪು, ತರಕಾರಿ ಮತ್ತು ದ್ವಿದಳ ಧಾನ್ಯಗಳನ್ನು ಬಳಸಿ ಕಡಿಮೆ ಖರ್ಚಿನಲ್ಲಿ ಪೌಷ್ಟಿಕ ಆಹಾರ ತಯಾರಿಸುವ ವಿಧಾನಗಳ ಬಗ್ಗೆಯೂ ಮಾಹಿತಿ ನೀಡಲಾಯಿತು.

ಕಾರ್ಯಕ್ರಮದ ಆರಂಭದಲ್ಲಿ ಸಂಸ್ಥೆಯ ಕ್ಷೇತ್ರ ಸಿಬ್ಬಂದಿ ಶಶಿಕಲಾ ಎಲ್ಲರನ್ನೂ ಸ್ವಾಗತಿಸಿದರು. ಕೊನೆಯಲ್ಲಿ ಗವಿಸಿದ್ದಮ್ಮ ವಂದನಾರ್ಪಣೆ ಸಲ್ಲಿಸಿದರು.

ಕಾರ್ಯಕ್ರಮದ ಅಂತ್ಯದಲ್ಲಿ ಗ್ರಾಮಸ್ಥರು ಒಟ್ಟಾಗಿ ತಮ್ಮ ಮಕ್ಕಳ ಆರೋಗ್ಯ ಹಾಗೂ ಪೌಷ್ಟಿಕತೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದಾಗಿ ಪ್ರತಿಜ್ಞೆ ಮಾಡಿದರು. ಇಂತಹ ಅರ್ಥಪೂರ್ಣ ಮಾಹಿತಿ ನೀಡಿದ ಸಂಪರ್ಕ ಸಂಸ್ಥೆಯ ಕಾರ್ಯಕ್ಕೆ ಗ್ರಾಮಸ್ಥರು ಕೃತಜ್ಞತೆ ಸಲ್ಲಿಸಿದರು.

## ಪಾದಚಾರಿ ಮಾರ್ಗ ಅತಿಕ್ರಮಣ ತೆರವು: ನಗರ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸೋಣ : ಶಾಸಕ ಭರತ್ ರೆಡ್ಡಿ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ನಗರದ ವಾರ್ಡ್ 07ರ ಬಾಪೂಜಿ ನಗರ ವೃತ್ತದಿಂದ ಬೆಂಕಿ ಮಾರೆಮ್ಮ ದೇವಸ್ಥಾನದವರೆಗಿನ ಪಾದಚಾರಿ ಮಾರ್ಗದ ಮೇಲಿನ ಅತಿಕ್ರಮಣವನ್ನು ನಗರ ಪಾಲಿಕೆ ಅಧಿಕಾರಿಗಳು ತೆರವುಗೊಳಿಸಿದರು. ಮನೆಗಳು ಹಾಗೂ ಅಂಗಡಿಗಳ ಮುಂದೆ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿಕೊಂಡು ನಿರ್ಮಿಸಿದ್ದ ಶೆಡ್‌ಗಳು, ತಾತ್ಕಾಲಿಕ ಕಟ್ಟಡಗಳು ಹಾಗೂ ಇತರೆ ಅಡಚಣೆಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಯಿತು.




ನಗರದ ಪ್ರಮುಖ ಸಂಪರ್ಕ ರಸ್ತೆಯಾಗಿರುವ ಈ ಮಾರ್ಗದಲ್ಲಿ ಅತಿಕ್ರಮಣ ಹೆಚ್ಚಾಗಿದ್ದರಿಂದ ಪಾದಚಾರಿಗಳ ಸಂಚಾರಕ್ಕೆ ತೊಂದರೆ ಉಂಟಾಗುತ್ತಿತ್ತು. ಜೊತೆಗೆ ವಾಹನ ದಟ್ಟಣೆ, ಟ್ರಾಫಿಕ್ ಸಮಸ್ಯೆ ಹಾಗೂ ಸಾರ್ವಜನಿಕರಿಗೆ ತೊಂದರೆ ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆ ಕೈಗೊಳ್ಳಲಾಯಿತು.

ಸ್ಥಳಕ್ಕೆ ಭೇಟಿ ನೀಡಿದ ಬಳ್ಳಾರಿ ನಗರ ಶಾಸಕ ಶ್ರೀ ನಾರಾ ಭರತ್ ರೆಡ್ಡಿ ಅವರು ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿ, ಅತಿಕ್ರಮಣ ತೆರವು ಕಾರ್ಯದ ಪ್ರಗತಿಯನ್ನು ಅವಲೋಕಿಸಿದರು. ಈ ವೇಳೆ ಸ್ಥಳೀಯ ನಿವಾಸಿಗಳು ಹಾಗೂ ವ್ಯಾಪಾರಿಗಳೊಂದಿಗೆ ಮಾತನಾಡಿದ ಅವರು, ಸಾರ್ವಜನಿಕ ಜಾಗಗಳನ್ನು ಅತಿಕ್ರಮಿಸದೇ ನಗರದ ಅಭಿವೃದ್ಧಿಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

"ಪಾದಚಾರಿ ಮಾರ್ಗಗಳು ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಲಾಗಿವೆ. ಅವುಗಳ ಮೇಲೆ ಅತಿಕ್ರಮಣ ಮಾಡುವುದರಿಂದ ಸಂಚಾರ ದಟ್ಟಣೆ ಮಾತ್ರವಲ್ಲದೆ ಅಪಘಾತಗಳಿಗೂ ಕಾರಣವಾಗುತ್ತದೆ. ಟ್ರಾಫಿಕ್ ಸಮಸ್ಯೆ ಉಂಟಾಗದಂತೆ ಎಲ್ಲರೂ ಜಾಗೃತಿ ವಹಿಸಿ ನಗರ ಅಭಿವೃದ್ಧಿಗೆ ಕೈಜೋಡಿಸಬೇಕು," ಎಂದು ಶಾಸಕ ಭರತ್ ರೆಡ್ಡಿ ಹೇಳಿದರು.

ಅತಿಕ್ರಮಣ ಮಾಡಿಕೊಂಡಿದ್ದ ಜನರಿಗೆ ತಿಳುವಳಿಕೆ ನೀಡಿದ ಶಾಸಕ, ಅಭಿವೃದ್ಧಿ ಕಾಮಗಾರಿಗಳಿಗೆ ಜನರ ಸಹಕಾರ ಅತ್ಯವಶ್ಯಕವಾಗಿದ್ದು, ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಿಯಮ ಪಾಲನೆ ಮಾಡುವಂತೆ ಕರೆ ನೀಡಿದರು. ಸ್ಥಳೀಯರು ಸಹ ಪಾದಚಾರಿ ಮಾರ್ಗ ತೆರವು ಕ್ರಮವನ್ನು ಸ್ವಾಗತಿಸಿದ್ದು, ಈ ಭಾಗದಲ್ಲಿ ಸಂಚಾರ ವ್ಯವಸ್ಥೆ ಸುಧಾರಣೆಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ನಗರದಲ್ಲಿ ಅತಿಕ್ರಮಣ ತೆರವು ಕಾರ್ಯಾಚರಣೆ ಮುಂದುವರಿಯಲಿದ್ದು, ಸಾರ್ವಜನಿಕ ಸ್ಥಳಗಳನ್ನು ಉಳಿಸುವ ನಿಟ್ಟಿನಲ್ಲಿ ಇನ್ನಷ್ಟು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

## ಶ್ರೀ ಶಿವಶರಣೆ ಬುಡ್ಡಮ್ಮ ದೇವಿಯ ನೂತನ ಮೂರ್ತಿಯ ಗ್ರಾಮ ಪ್ರವೇಶ ಹಾಗೂ ಕುಂಭೋತ್ಸವ ಅದ್ದೂರಿ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲಾ ಕೊಪ್ಪಳ ತಾಲೂಕು ಮೈನಹಳ್ಳಿ ಗ್ರಾಮದ ಶ್ರೀ ಶಿವಶರಣಿ ಬುಡ್ಡಮ್ಮ ದೇವಿಯ ನೂತನ ಮೂರ್ತಿಯ ಗ್ರಾಮ ಪ್ರವೇಶ ಹಾಗೂ ಕುಂಭೋತ್ಸವ ಅದ್ದೂರಿ ಕಾರ್ಯಕ್ರಮವು ಊರಿನ ಸಕಲ ಸದ್ಭಕ್ತರು, ಸಮ್ಮೇಳ, ನಂದಿಕೋಲು, ಭಜನಾಮಂಡಳಿಯವರು ಸೇರಿಕೊಂಡು ಬಾಜಾಭಜಂತ್ರಿಯೊಂದಿಗೆ ತಾಯಿ ಶ್ರೀ ಶಿವಶರಣಿ ಬುಡ್ಡಮ್ಮದೇವಿಯ ನೂತನ ಮೂರ್ತಿಯನ್ನು ಸುಮಂಗಲೆಯರಿಂದ 151 ಕುಂಭಗಳನ್ನು ತರುವದರ ಮೂಲಕ ಹಾಗೂ ಸಕಲ ಸದ್ಭಕ್ತ–ರಿಂದ ಮೈನಹಳ್ಳಿಯ ಊರಿನ ದ್ವಾರ ಬಾಗಿಲಿನಿಂದ ಹಿಡಿದು ದೇವಸ್ಥಾನದ ವರೆಗೂ ಅದ್ದೂರಿಯಾಗಿ ಮೆರವಣಿಗೆ ಮೂಲಕ ಕರೆತಂದು ತಾಯಿಯ ಮೂರ್ತಿಯನ್ನು ಜಲವಾಸಕ್ಕೆ ಪಾತ್ರರಾದರೂ.

## ಬಡ ಮಕ್ಕಳಿಗೆ ಶಿಕ್ಷಣ ಅಗತ್ಯ: ಉರುಕುಂದ ರೆಡ್ಡಿ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:


ಸಮುದಾಯದಲ್ಲಿ ಇಂದಿಗೂ ಅನೇಕ ಪ್ರತಿಭಾನ್ವಿತ ವಿದ್ಯಾರ್ಥಿಗಳು ಇದ್ದಾರೆ. ಅಂಥವರಿಗೆ ಬಡತನ ಅಡ್ಡಿ ಬರುತ್ತಿರುವುದರಿಂದ ಸಿರಿವಂತರು ನೆರವಾಗಬೇಕೆಂದು ಕರ್ನಾಟಕ ರಾಜ್ಯ ಭಗೀರಥ ಮಹಾಸಭಾದ ರಾಜ್ಯಾಧ್ಯಕ್ಷ ಡಾ.ಯು.ಉರುಕುಂದ ರೆಡ್ಡಿ ತಿಳಿಸಿದ್ದಾರೆ.



ಭಗೀರಥ ಜಯಂತಿ ಪ್ರಯುಕ್ತ ಸಮುದಾಯದ ಬಾಂಧವರಿಗೆ ಶುಭಾಶಯಗಳನ್ನು ಸಲ್ಲಿಸಿದ ಅವರು, ರಾಜ್ಯದ ಬಡ ಮಕ್ಕಳು ಹಾಗೂ ಉನ್ನತ ಶಿಕ್ಷಣದಿಂದ ವಂಚಿತರಾಗಿರುವ ಮಕ್ಕಳಿಗೆ ಅಗತ್ಯವಾಗಿ ಹಣಕಾಸಿನ ನೆರವು ಒದಗಿಸಿ ಉತ್ತಮ ಶಿಕ್ಷಣ ಕಲಿಕೆಗೆ ಪ್ರೋತ್ಸಾಹಿಸಬೇಕಿದೆ ಎಂದು ತಿಳಿಸಿದ್ದಾರೆ.

ಅದೇ ರೀತಿ, ಸಮುದಾಯಗಳಲ್ಲಿ ಇಂದಿಗೂ ಅನೇಕರು ಆರ್ಥಿಕವಾಗಿ ತೀರಾ ಹಿಂದುಳಿದಿದ್ದು ಸರ್ಕಾರದಿಂದ ಆರ್ಥಿಕ ಸೌಲಭ್ಯಗಳನ್ನು ಒದಗಿಸಲು ಶ್ರಮಿಸಬೇಕೆಂದು ಡಾ.ಯು. ಉರುಕುಂದ ರೆಡ್ಡಿ ತಿಳಿಸಿದ್ದಾರೆ.

## ಸೂರ್ಯೋದಯ ಪಬ್ಲಿಕ್ ಶಾಲೆ: ಹಂಡ್ರೆಡ್ ಪರ್ಸೆಂಟ್ ರಿಸಲ್ಟ್ ಸ್ಪರ್ಶ ನಂದಕುಮಾರ ರಾಜ್ಯಕ್ಕೆ 9ನೇ ರ್‍ಯಾಂಕ್ (615 / 625)



ಭಾಲ್ಕಿ:


ಭಾಲ್ಕಿ ಪಟ್ಟಣದ ಸೂರ್ಯೋದಯ ಪಬ್ಲಿಕ್ ಶಾಲೆಯ ಪ್ರಸ್ತುತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಹಂಡ್ರೆಡ್ ಪರ್ಸೆಂಟ್ ಆಗಿದ್ದು, ಸ್ಪರ್ಶ ನಂದಕುಮಾರ (615/625) ಅಂಕ ಪಡೆದು ರಾಜ್ಯ ಮಟ್ಟಕ್ಕೆ 9ನೇ ರ್‍ಯಾಂಕ್ ಗಿಟ್ಟಿಸಿಕೊಂಡು ಸೂರ್ಯೋದಯ ಪಬ್ಲಿಕ್ ಶಾಲೆಯ ಕೀರ್ತಿ ಹೆಚ್ಚಿಸಿದ್ದಾನೆ ಎಂದು ಮುಖ್ಯಗುರು ಅನೀಲ ಪಾಟೀಲ್ ಅವರು ತಿಳಿಸಿದ್ದಾರೆ.

ಪರೀಕ್ಷೆಗೆ ಹಾಜರಾದ ಎಲ್ಲ 72 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 13 ವಿದ್ಯಾರ್ಥಿಗಳು 95ಕ್ಕೂ ಹೆಚ್ಚು ಅಂಕ ಪಡೆದರೆ, 22 ಮಕ್ಕಳು ಶೇ.90 ಅಂಕ ಪಡೆದು, 31 ಮಕ್ಕಳು ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದಾರೆ.

ಸ್ಪರ್ಶ ನಂದಕುಮಾರ (615/625), ಆಸ್ಮಿತಾ ವಿಠಲ (610/625) ಸಂಧ್ಯಾರಾಣಿ ಸಂಜಯಕುಮಾರ (601/625), ವಿಜಯಲಕ್ಷ್ಮೀ ನರಸಿಂಗ 598/625), ಸುಷ್ಮಾ ಸಂತೋಷಕುಮಾರ (615/625), ಸಾಕ್ಷಿ ಮಲ್ಲಯ್ಯಾ (605/625), ಸೃಷ್ಟಿ ದತ್ತಾತ್ರಯ 599/625), ಉಷಾ ಬಾಬಶೆಟ್ಟಿ (597/625) ಅಂಕ ಪಡೆದು ಶಿಕ್ಷಕರಿಗೆ, ಪಾಲಕರಿಗೆ ಖುಷಿ ತಂದು ಕೊಟ್ಟಿದ್ದಾರೆ ಎಂದು ಸಂಸ್ಥೆ ಅಧ್ಯಕ್ಷ ಸಂತೋಷ ಖಂಡ್ರೆ ಹೇಳುತ್ತಾರೆ.

ಮಕ್ಕಳ ಸಾಧನೆಗೆ ಸಂಸ್ಥೆ ಅಧ್ಯಕ್ಷ ಸಂತೋಷ ಖಂಡ್ರೆ, ಕಾರ್ಯದರ್ಶಿ ಉಷಾ ಸಂತೋಷ ಖಂಡ್ರೆ, ಮುಖ್ಯಗುರು ಅನೀಲ ಪಾಟೀಲ್ ಸೇರಿದಂತೆ ಸಮಸ್ಥ ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿ, ಅಭಿನಂದಿಸಿದ್ದಾರೆ.

**'ಸೂರ್ಯೋದಯ ಪಬ್ಲಿಕ್ ಶಾಲೆಯ ಫಲಿತಾಂಶದಲ್ಲಿ ಪ್ರತಿ ವರ್ಷ ಏರಿಕೆ ಕಂಡು ಬರುತ್ತಿದೆ. ಕಾರಣ ನಮ್ಮ ಸಿಬ್ಬಂದಿ ವರ್ಗದವರು ಘಟಕ ಪರೀಕ್ಷೆ, ಮಾಸಿಕ ಪರೀಕ್ಷೆ, ಯುನಿಟ್ ಟೆಸ್ಟ್, ಅರ್ಧ ವಾರ್ಷಿಕ, ಪೂರ್ವ ಸಿದ್ಧತಾ ಪರೀಕ್ಷೆ ತೆಗೆದುಕೊಂಡು, ಹಿಂದುಳಿದ ಮಕ್ಕಳನ್ನು ತಕ್ಷಣ ಗುರುತಿಸಿ ಅವರನ್ನು ಸುಧಾರಿಸುತ್ತಾರೆ. ಜೊತೆಗೆ ನಮ್ಮ ಮಕ್ಕಳು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ನಡೆಯುವ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ಕ್ರೀಡೆಗಳಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಈ ವರ್ಷ ಸ್ಪರ್ಶ ನಂದಕುಮಾರ ರಾಜ್ಯಕ್ಕೆ 9ನೇ ರ್‍ಯಾಂಕ್ ಪಡೆದಿದ್ದು ಹೆಮ್ಮೆಯ ವಿಷಯ.'–**



**ಉಷಾ ಸಂತೋಷಕುಮಾರ ಖಂಡ್ರೆ**
**ಕಾರ್ಯದರ್ಶಿ ,**
**ಸೂರ್ಯೋದಯ ಪಬ್ಲಿಕ್ ಶಾಲೆ ಭಾಲ್ಕಿ.**

## ರಾಜ್‌ಕುಮಾರ್ ಆದರ್ಶಗಳು ಇಂದಿಗೂ ದಾರಿದೀಪ: ನಾಗರಾಜ್

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಟಸಾರ್ವಭೌಮ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ವರನಟ ದಿ. ಡಾ. ರಾಜ್‌ಕುಮಾರ್ ಅವರ ಜನ್ಮದಿನದ ಅಂಗವಾಗಿ ನಗರದ ಡಾ. ರಾಜ್‌ಕುಮಾರ್ ಪಾರ್ಕ್‌ನಲ್ಲಿ ಶುಕ್ರವಾರ ಜಿಲ್ಲಾಡಳಿತದ ವತಿಯಿಂದ ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ಪೂಜೆ ಸಲ್ಲಿಸುವ ಮೂಲಕ ಗೌರವ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್ ಮಾತನಾಡಿ, ಡಾ. ರಾಜ್‌ಕುಮಾರ್ ಅವರು ಕೇವಲ ಕನ್ನಡ ಚಿತ್ರರಂಗದ ಮೇರುನಟರಲ್ಲ, ಕನ್ನಡ ನಾಡು–ನುಡಿಯ ಅಸ್ಮಿತೆಯ ಪ್ರತೀಕವಾಗಿದ್ದರು ಎಂದು ಬಣ್ಣಿಸಿದರು. ತಮ್ಮ ಅಭಿನಯ, ಸರಳತೆ, ಸಂಸ್ಕಾರ ಹಾಗೂ ಸಮಾಜಮುಖಿ ಚಿಂತನೆಗಳ ಮೂಲಕ ರಾಜ್‌ಕುಮಾರ್ ಜನಮಾನಸದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ ಎಂದು ಹೇಳಿದರು. "ರಾಜ್‌ಕುಮಾರ್ ಅವರು ಕನ್ನಡಿಗರ ಆತ್ಮಗೌರವದ ಸಂಕೇತ. ಅವರ ಬದುಕು, ಅವರ ಮೌಲ್ಯಗಳು, ನಾಡಿನ ಮೇಲಿನ ಬದ್ಧತೆ ಇಂದಿನ ಪೀಳಿಗೆಗೆ ಮಾದರಿ. ಯುವಜನತೆ ಅವರ ಆದರ್ಶಗಳನ್ನು ಅಳವಡಿಸಿಕೊಂಡು ನಾಡು, ನುಡಿ, ಸಂಸ್ಕೃತಿಯ ಉಳಿವಿಗೆ ಶ್ರಮಿಸಬೇಕು," ಎಂದು ಮುಂಡ್ರಿಗಿ ನಾಗರಾಜ್ ಕರೆ ನೀಡಿದರು.

ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಮಾನವೀಯ ಮೌಲ್ಯಗಳನ್ನು ತಮ್ಮ ಬದುಕಿನ ಮೂಲಕ ಸಾರಿದ ರಾಜ್‌ಕುಮಾರ್ ಅವರ ಕೊಡುಗೆ ಅನನ್ಯ ಎಂದು ಅವರು ಅಭಿಪ್ರಾಯಪಟ್ಟರು. ಕನ್ನಡಪರ ಹೋರಾಟಗಳಲ್ಲಿ ಡಾ. ರಾಜ್ ಅವರ ಪಾತ್ರ ಮತ್ತು ನಾಡಿನ ಬಗ್ಗೆ ಹೊಂದಿದ್ದ ಅಭಿಮಾನ ಸ್ಮರಣೀಯ ಎಂದರು.

## ಶಾಂತಿ ಸಮಾಜಕ್ಕೆ ದಿಕ್ಕು ತೋರುವ ಮೌಲ್ಯ



**ಭಾಲ್ಕಿ:** ಆದಿಶಕ್ತಿಯ ಆದರ್ಶ ಅವತಾರವಾದ ಶ್ರೀ ವಾಸವಿ ದೇವಿಯ ಜಯಂತಿಯ ಪವಿತ್ರ ಸಂದರ್ಭದಲ್ಲಿ ಭಾಲ್ಕಿ ತಾಲೂಕಿನ ಆರ್ಯ ವೈಶ್ಯ ಸಮಾಜದ ವತಿಯಿಂದ ಹಮ್ಮಿಕೊಳ್ಳಲಾದ ಭವ್ಯ ಜಯಂತಿ ಆಚರಣೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಭಾಗವಹಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಅವರು ಮಾತನಾಡಿ, ವ್ಯಾಪಾರ ಮತ್ತು ಧರ್ಮವನ್ನು ಸಮನಾಗಿ ಪಾಲಿಸುವ ಆರ್ಯ ವೈಶ್ಯರ ಆರಾಧ್ಯ ದೇವತೆ ವಾಸವಿ ಮಾತೆಯ ಆದರ್ಶಗಳು, ಧರ್ಮನಿಷ್ಠೆ, ತ್ಯಾಗ, ಶಾಂತಿ ಹಾಗೂ ಸೇವಾಭಾವನೆ ಸಮಾಜಕ್ಕೆ ದಿಕ್ಕು ತೋರುವ ಮೌಲ್ಯಗಳಾಗಿವೆ ಎಂದು ಹೇಳಿದರು.

ಇಂತಹ ಮಹಾನ್ ಆದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಏಕತೆ ಮತ್ತು ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

## ಜನರ ಹಿತರಕ್ಷಣೆಗಾಗಿ ನ್ಯಾಯಾಲಯ



**ಕಂಪ್ಲಿ:** ಜನರ ಹಿತರಕ್ಷಣೆ ಹಾಗೂ ಹಕ್ಕುಗಳನ್ನು ಒದಗಿಸಿಕೊಡುವ ಜೊತೆಗೆ ಸಕಾಲದಲ್ಲಿ ಜನತೆಗೆ ನ್ಯಾಯ ಒದಗಿಸಿಕೊಡುವುದು ನ್ಯಾಯಾಲಯದ ಮುಖ್ಯ ಉದ್ದೇಶವಾಗಿದೆ ಎಂದು ಕರ್ನಾಟಕ ಉಚ್ಚನ್ಯಾಯಾಲಯ ಮತ್ತು ಆಡಳಿತಾತ್ಮಕ ನ್ಯಾಯಾಧೀಶರಾದ ಆರ್.ನಟರಾಜ ಅವರು ಹೇಳಿದರು.

ಕಂಪ್ಲಿ ಪಟ್ಟಣದ 20ನೇ ವಾರ್ಡಿನ ಶಿಬಿರದಿನ್ನಿ (ಮಾರುತಿನಗರ) ಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ನೂತನ ಸಿವಿಎಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಉದ್ಘಾಟಿಸಿ ಅವರು ಮಾತನಾಡಿದರು.

ಜನರು ಕೇಸ್ ವಿಚಾರಣೆಗಾಗಿ ಕಂಪ್ಲಿಯಿಂದ ದೂರದ ಬಳ್ಳಾರಿ ಕೋರ್ಟ್ ಗೆ ಹೋಗಬೇಕಾಗಿತ್ತು. ಕಂಪ್ಲಿಯಲ್ಲಿ ಕೋರ್ಟ್ ಆಗದಿದ್ದರೆ, ಅಪೂರ್ಣವಾಗುತ್ತಿತ್ತು. ಕೋರ್ಟ್ ಸ್ಥಾಪನೆಯೊಂದಿಗೆ ಹೂ ಅರಳಿದಂತಾಗಿದೆ ಎಂದು ತಿಳಿಸಿದರು.

ಇಲ್ಲಿನ ಜನರು ಹಕ್ಕು ಭಾದಿತರಾಗಿದ್ದಾರೆ. ಇಲ್ಲಿನ ಜನತೆಗೆ ಕೋರ್ಟ್ ಅತ್ಯವಶ್ಯಕವಾಗಿದೆ. ಇಲ್ಲಿನ ಪುರಸಭೆಗೆ ಒಳಪಡುವ ಕಟ್ಟಡದಲ್ಲಿ ಕೋರ್ಟ್ ಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಇಲ್ಲಿನ ನಗದಿತ ಸ್ಥಳದಲ್ಲಿರುವ ಕಟ್ಟಡಕ್ಕೆ ಹೊಸ ರೂಪುರೇಷೆ ನೀಡಲಾಗುತ್ತದೆ. ಸರ್ಕಾರ ಅನುಮತಿ ನೀಡಿದರೆ, ಭವ್ಯ ಕಟ್ಟಡ ಮಾಡಲಿದ್ದೇವೆ ಎಂದರು.

ಉತ್ತಮ ಸ್ಥಳದಲ್ಲಿ ಕೋರ್ಟ್ ಸ್ಥಾಪಿತವಾಗಬೇಕಾಗಿತ್ತು. ಆದರೆ, ಇಲ್ಲಿನ ಇಕ್ಕಟ್ಟಿನ ಸ್ಥಳದಲ್ಲಿ ಹಾಗೂ ಜನರು ಬಾರದ ಸ್ಥಳದಲ್ಲಿ ಕೋರ್ಟ್ ಕಟ್ಟಡ ನೀಡಿರುವುದು ಅಸಮಾಧಾನವಿದೆ. ಇಲ್ಲಿನ ಕೋರ್ಟ್ ಸಾಕಾಗಲ್ಲ. ಇಲ್ಲಿ 63 ಜನ ವಕೀಲರಿದ್ದು, ಒಂದು ಸಾವಿರ ಕೇಸ್ ಇರುತ್ತಿದ್ದವು. ಈಗ ಕಂಪ್ಲಿಯಲ್ಲೇ ನ್ಯಾಯಾಲಯ ಸ್ಥಾಪಿತವಾಗಿದೆ. ಇದರಿಂದ ಈ ಭಾಗದ ಜನರು ನ್ಯಾಯ ಪಡೆಯುವ ಜೊತೆಗೆ ಸೌಲಭ್ಯಗಳನ್ನು ಪಡೆದುಕೊಳ್ಳಲಿದ್ದಾರೆ. ಜನರ ಹಿತರಕ್ಷಣೆ ಹಾಗೂ ಜನರು ತಮ್ಮ ಹಕ್ಕುಗಳನ್ನು ಪಡೆದು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದಾರೆ ಎಂದರು. ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಸದಸ್ಯ ಅನೀಲ್ ಕುಮಾರ್ ಅವರು ಮಾತನಾಡಿ, ಕಂಪ್ಲಿಯಲ್ಲಿ ಈಗ ನ್ಯಾಯಾಲಯ ಸ್ಥಾಪನೆಗೊಂಡಿದೆ. ಕಂಪ್ಲಿ ಬಳಿಯಲ್ಲಿ ಮೀಸಲಿಸಿರುವ 3.12 ಎಕರೆ ಜಾಗದಲ್ಲಿ ಸುಮಾರು 25 ಕೋಟಿ ರೂ. ಅನುದಾನ ಮಂಜೂರು ಮಾಡಿಸಿ, ಭವ್ಯ ಕಟ್ಟಡ ನಿರ್ಮಿಸಿಕೊಡುವ ಭರವಸೆಯನ್ನು ಶಾಸಕ ಜೆ.ಎನ್.ಗಣೇಶ ನೀಡಿದ್ದಾರೆ. ಸಕಾಲದಲ್ಲಿ ಕಕ್ಷಿದಾರರಿಗೆ ನ್ಯಾಯ ಒದಗಿಸಿಕೊಡುವ ನಿಟ್ಟಿನಲ್ಲಿ ವಕೀಲರು ಮುಂದಾಗಬೇಕು ಎಂದರು.

ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಜಿ.ಶಾಂತಿ, ಎಸ್.ಇಸ್ಮಾಯಿಲ್ ಜಬಿವುಲ್ಲಾ, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯ ಜೆ.ಎಂ.ಅನಿಲ್ ಕುಮಾರ, ಲೋಕೋಪಯೋಗಿ ಇಇಬಿ.ವಿಜಯ ಭಾಸ್ಕರ್, ವಕೀಲರಾದ ಪ್ರಭಾಕರ, ಹರೀಶ್, ರುದ್ರಪ್ಪ, ಶಿವಪ್ಪ, ಯಂಕಪ್ಪ, ನಟರಾಜ, ಹುಲುಗಪ್ಪ, ವೀರಣ್ಣ, ಮಾರುತಿಸಿಂಗ್, ಮೋಹನ್ ಕುಮಾರ್ ದಾನಪ್ಪ, ಮುಂಖಡರಾದ ಕೆ.ಎಂ.ಹೇಮಯ್ಯಸ್ವಾಮಿ, ಹೊಸಕೋಟೆ ಜಗದೀಶ, ಜಿ.ರಾಮಣ್ಣ, ಬಿ.ಸಿದ್ದಪ್ಪ ಸೇರಿದಂತೆ ಅನೇಕರಿದ್ದರು.

# ಅಮಾಯಕರ ಮೇಲೆ ಯಾಕೆ ಪೋಲಿಸ್ ಶೌರ್ಯ..?

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಟ್ರಾಫಿಕ್ ಪೊಲೀಸ್ ಇಲಾಖೆ ಪೇದೆ ಪಂಪಾಪತಿ ಲಂಚಕ್ಕಾಗಿ ಹೊಸಳ್ಳಿ ಇಜೆ ಕ್ಯಾಂಪಿನ ವಸಂತಕುಮಾರ್ ಎಂಬ ವ್ಯಕ್ತಿಯ ಬೈಕ್ ತಡೆದು ಹೆಲ್ಮೆಟ್ ಹಾಕಿಲ್ಲ. ಕಾಗದ ಪತ್ರ ಎಲ್ಲಿ ಎಂದು ಬೈಕ್ ಕೀಲಿ ತೆಗೆದು–ಕೊಂಡು ಪ್ಯಾಂಟ್ ಜಿಪ್ ಹಾಕಿಕೊಳ್ಳುತ್ತಾನೆ.ಪಾಪ ಅ ಯುವಕ ಎಷ್ಟು ಬೇಡಿಕೊಂಡರು ಕೊಡದೆ ಎರಡು ಸಾವಿರ ಕೋಡಿ ಇಲ್ಲಾಂದ್ರೆ ಫೈನ್ ಹಾಕುತ್ತೇನೆ ಎಂದು ಬೆದರಿಸಿ ಮಾತಿಗೆ ಮಾತು ಬೆಳೆದು ಪೊಲೀಸ್ ಪೇದೆ ಪಂಪಾಪತಿ ಅಮಾಯಕ ಯುವಕನ ಮೇಲೆ ಹಲ್ಲೆ ನಡೆಸಿದ್ದಾನೆ.

ಇಂದು ಗಂಗಾವತಿ ರಸ್ತೆಯಲ್ಲಿ ಹೊಸಳ್ಳಿ (EeÉ) ಕ್ಯಾಂಪ್ ನಲ್ಲಿ ಬೆಳಗ್ಗೆ 9.30 ವರಿ ಗಂಟೆಗೆ ವಸಂತಕುಮಾರ್ ಎಂಬ ವ್ಯಕ್ತಿ ಹೊಸಳ್ಳಿ ಕ್ಯಾಂಪ್ ಅವರು ಹೊಸಳ್ಳಿ ಇಜೆ ಗ್ರಾಮದ ಅವರು ಚಿಕ್ಕಪ್ಪ ಶಿವಪ್ಪ ಮೂಲೆ ಮನೆ ಅವರು ಮನೆಗೆ ಯಾವುದೇ ಕೆಲಸದ ಕಾರಣ ಮನೆಗೆ ಬಂದಿರುತ್ತಾನೆ.

ಕೆಲಸ ಮುಗಿಸಿಕೊಂಡು ತಮ್ಮ ಚಿಕ್ಕಪ್ಪನ ಮಗನನ್ನು ಬೈಕ್ ನಲ್ಲಿ ಕೂರಿಸಿಕೊಂಡು ಹೊಸಳ್ಳಿ ಕ್ಯಾಂಪ್ ನಲ್ಲಿ ಇರುವ ತಮ್ಮ ಮನೆಗೆ ಹೋಗುವಾಗ. 36 ರೆಸ್ಟೋರೆಂಟ್ ನಲ್ಲಿ ಇದ್ದ ಟ್ರಾಫಿಕ್ ಪೊಲೀಸ್ ಇಲಾಖೆ ಸಿಬ್ಬಂದಿ ಪಂಪಾಪತಿ ಎಂಬವರು ವಸಂತಕುಮಾರ್ ಎಂಬ ಯುವಕನ ಲೇ ಬೈಕ್ ನಿಲ್ಲಿಸು ಎಂದು ಅವಾಜ್ ಹಾಕಿದನು.



ಆ ಹುಡುಗ ಬೈಕ್ ನಿಲ್ಲಿಸಿದಾಗ ಇಲ್ಲಿಗೆ ಬಾ ಎಂದು ಬೈದರು ಸಿ ಹೆಲ್ಮೆಟ್ ಯಾಕೆ... ಹಾಕಿಲ್ಲ.. ಬೈಕ್ ದಾಖಲೆ ಎಲ್ಲಿ ಎಂದು ಅವಾಜ್ ಮೂಲಕ ಕೇಳಿದಾಗ. ಅ ಹುಡುಗ ಸರ್ ಇದೆ ಊರು ಸರ್ ನಮ್ಮ ಮನೆ ಇಲ್ಲಿ ಕಾಣುತ್ತದೆ ನೋಡಿ ಸರ ಎಂದು ಕೈ ತೋರಿಸಿ ಬೇಡಿಕೊಂಡು ಲೇ ಹೆಲ್ಮೆಟ್ ದಾಖಲೆ ಎಲ್ಲಿ ಅಂತಹ ಕೇಳಿದರೆ ನಿಮ್ಮ ಮನೆಯನ್ನು ಕೈ ಯಿಂದ ತೋರಿಸುತ್ತೇನೆ ಲೇ ನಾನು ನಿಮ್ಮ ಮನೆಗೆ ಬಂದು ತೆಗೆದುಕೊಳ್ಳಬೇಕು ಎಂದು ವಸಂತಕುಮಾರ್ ಎಂಬ ಅಮಾಯಕ ಯುವಕ ಕಪಾಳಕ್ಕೆ ಟ್ರಾಫಿಕ್ ಪೊಲೀಸ್ ಪೇದೆ ಪಂಪಾಪತಿ ಬಾರಿಸಿದ್ದಾನೆ.

ಮತ್ತೆ ತಮಗೂ ಬೈಕ್ ನಲ್ಲಿ ಇದ್ದ ಪೊಲೀಸ್ ಪಂಪಾಪತಿ ಲಾಠಿ ತೆಗೆದುಕೊಂಡು ತನಗೆ ಟ್ರಾಫಿಕ್ ಪೊಲೀಸ್ ಇಲಾಖೆ ಪೇದೆ ಪಂಪಾಪತಿ ಅವರು ಮನಬಂದಂತೆ ಥಳಿಸಿ ತಲೆಗೆ.ಮೊಣಕಾಲಿಗೆ. ತೋಡಿಗೆ.ಲಾಠಿ ಮೂಲಕ ಬಾಸುಂಡೆ ಬರುವ ತನಕ ಹೊಡೆದಿದ್ದಾನೆ ಎಂದು ಸುದ್ದಿಗಾರರೊಂದಿಗೆ ಹೇಳಿಕೆ ನೀಡುವುದರ ಮೂಲಕ ಯುವಕನು ಅಳಲು ತೋಡಿಕೊಂಡನು.

ಸುದ್ದಿ ತಿಳಿದಂತೆ ವಸಂತಕುಮಾರ್ ಯುವಕನ ಮನೆಯವರು ಓಡೋಡಿ ಬಂದು ಜ್ಞಾನ ತಪ್ಪಿ ಬಿದ್ದಿದ್ದ ಯುವಕನ ಎತ್ತಿಕೊಂಡು ನಗರ ಸರ್ಕಾರಿ ಆಸ್ಪತ್ರೆಯ ದಾಖಲಿಸಿ ಎಮರ್ಜೆನ್ಸಿ ವಾರ್ಡಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ನಂತರ ಸರ್ಕಾರಿ ಆಸ್ಪತ್ರೆಯ ವೈದ್ಯರು ಚಿಕಿತ್ಸೆ ನೀಡಿ ತಲೆಗೆ ಮೊಣಕಾಲಿಗೆ ಬಲವಾದ ಪಟ್ಟು ಬಿದ್ದಿದ್ದರಿಂದ ತಲೆ ಸ್ಕ್ಯಾನ್ ಮಾಡಿಸಿ. ಮತ್ತು ಮೊಣಕಾಲು ಎಕ್ಸ್ ರೇ ಮಾಡಿಸಿ ಎಂದು ಡಾಕ್ಟರ್ ತಂದೆ ತಾಯಂದಿರು ತಿಳಿಸಿದ್ದಾರೆ.

ಈ ಅಡ್ಮಿಟ್ ಆಗಿರುವ ವಿಷಯ ತಿಳಿದ ತಕ್ಷಣ ಓಡಾಡಿ ಬಂದು ಪೊಲೀಸ್ ಪೇದೆ ಪಂಪಾಪತಿ ಅಸ್ಪತ್ರೆಗೆ ಬಂದು ಸುಖ ಸುಮ್ಮನೇ ಅಡ್ಮಿಟ್ ಆಗುತ್ತಾನೆ ಎಂದು ಸಾರ್ವಜನಿಕರು ದೂರವಾಗಿದೆ.

ತಕ್ಷಣ ಡಾಕ್ಟರ್ ಗ್ರಾಮೀಣ ಠಾಣೆ ಪೊಲೀಸ್ ಇಲಾಖೆ ಸಿಬ್ಬಂದಿ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ಯುವಕ ವಿಚಾರಿಸಿ ಎಮ್. ಎಲ್. ಸಿ ಮಾಡಿಕೊಂಡು ಹೋಗಿ ಗ್ರಾಮೀಣ ಠಾಣೆಯಲ್ಲಿ ಎಫ್‌ಆರ್ ದಾಖಲಿಸಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಬಿಜೆಪಿ ಮುಖಂಡರಾದ ಕೆ.ಕರಿಯಪ್ಪ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಹಲ್ಲೆ ಒಳಗಾದ ವಸಂತಕುಮಾರ್ ಯುವಕನನ್ನು ವಿಚಾರಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈಗಾಗಲೇ ಪೊಲೀಸ್ ಇಲಾಖೆ ಅಧಿಕಾರಿಗಳು ಲಂಚ ಪಡೆಯುವುದಕ್ಕಾಗಿ ಅಮಾಯಕರ ಯುವಕರು ಸಾವಿರಾರು ರೂ ಲಂಚ ಬೇಕಿತ್ತಾ. ಇವರಿಗೇ ಪೊಲೀಸ್ ಇಲಾಖೆಯ ಅಧಿಕಾರಿಗಳು ಪ್ರತಿಯೊಬ್ಬರೂ ಲಂಚ ಪಡೆಯುವುದಕ್ಕಾಗಿ ರೋಡ್ ಮೇಲೆ ಬಂದು ನಿಲ್ಲುತ್ತಾರೆ. ಏನೂ ಪೊಲೀಸ್ ಅಧಿಕಾರಿಗಳ. ಯಾಕೆ ಲಂಚ ಅಮಾಯಕ ಜನರು ಯಿಂದ ಫೈನ್ ಹಾಕುವುದರ ಮೂಲಕ ಲಂಚ ಪಡೆಯುತ್ತೀರಿ. ಇದೆಲ್ಲ ಯಾಕೆ...?ಎಂದು ಬಿಜೆಪಿ ಮುಖಂಡ ಕೆ.ಕರಿಯಪ್ಪ ಪ್ರಶ್ನೆ ಮಾಡಿದ್ದಾರೆ.

ಪೊಲೀಸ್ ಇಲಾಖೆಯ ಅಧಿಕಾರಿಗಳು ಇಲ್ಲ ಸರ ನಾವು ಏನು ಮಾಡಬೇಕು ಸರ್ ಶಾಸಕರಿಗೂ ಎಂಎಲ್ಸಿ. ಎಸ್ಪಿ. ಹಾಗೂ ಸಂಸದರು ಸಚಿವರಿಗೂ .ಮಾಮೂಲಿ ಮುಟ್ಟಿಸಬೇಕು ಸರ್ ಇಲ್ಲದಿದ್ರೆ ಬೇರೆ ಕಡೆಗೆ ವರ್ಗಾವಣೆ ಮಾಡುತ್ತವೆ ಎಂದು ಹೇಳುತ್ತಾರೆ. ಇದಕ್ಕೆ ಕಾಂಗ್ರೆಸ್ ಸಿದ್ದರಾಮಯ್ಯ ಸರ್ಕಾರ ಕೈಜೋಡಿಸದೆ ಎಂದು ಆರೋಪಿಸಿದರು.

## ನಿಧನಕ್ಕೆ ಜಿಲ್ಲಾ ಉಸ್ತುವಾರಿ ಸಂತಾಪ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲೂಕಿನ ನಾವದಗಿ ಗ್ರಾಮದಲ್ಲಿ ಕಳೆದ 23–04–2026 ಗುರುವಾರ ಸಂಜೆ ಸಂಭವಿಸಿದ ಸಿಡಿಲು ಬಡಿತದಿಂದ ಇಬ್ಬರು ಯುವಕರು ಮೃತಪಟ್ಟ ದುರ್ಘಟನೆ ಅತ್ಯಂತ ದುಃಖಕರವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರು ಸಂತಾಪ ವ್ಯಕ್ತಪಡಿಸಿದರು.

ಮೃತರಾದ ನಾವದಗಿ ಗ್ರಾಮದ ಶ್ರೀ ರೇವಣಸಿದ್ದಪ್ಪ (ತಂದೆ: ಹಣಮಂತ) ಹಾಗೂ ಜೇವರ್ಗಿ ತಾಲೂಕಿನ ಸಿಗರತಹಳ್ಳಿ ಗ್ರಾಮದ ಶ್ರೀ ಯಲ್ಲಾಲಿಂಗ (ತಂದೆ: ಸಿದ್ದಪ್ಪ) ಅವರ ನಿಧನಕ್ಕೆ ಸಚಿವರು ಹೃತ್ಪೂರ್ವಕ ಸಂತಾಪ ಸೂಚಿಸಿದರು.

ಈ ಹಿನ್ನೆಲೆಯಲ್ಲಿ ಸಚಿವರಾದ ಈಶ್ವರ ಖಂಡ್ರೆ ಅವರು ನಾವದಗಿ ಗ್ರಾಮಕ್ಕೆ ಭೇಟಿ ನೀಡಿ ರೇವಣಸಿದ್ದಪ್ಪ ಅವರ ಕುಟುಂಬ ಸದಸ್ಯರಿಗೆ ಧೈರ್ಯ ತುಂಬಿ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ



ಅವರ ಕುಟುಂಬಕ್ಕೆ ₹5 ಲಕ್ಷ ಪರಿಹಾರ ಧನದ ಚೆಕ್ ವಿತರಿಸಲಾಯಿತು. ಜೇವರ್ಗಿ ತಾಲೂಕಿನ ಯಲ್ಲಾಲಿಂಗ ಅವರ ಕುಟುಂಬಕ್ಕೂ ಸಹ ₹5 ಲಕ್ಷ ಪರಿಹಾರ ಧನವನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತಗಳು ಸಿಡಿಲು ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಹೆಚ್ಚಿನ ಎಚ್ಚರಿಕೆ ಮತ್ತು ಜಾಗೃತಿ ಮೂಡಿಸುವ ಕಾರ್ಯವನ್ನು ಕೈಗೊಳ್ಳಬೇಕೆಂದು ಸಚಿವರು ಸೂಚನೆ ನೀಡಿದರು.

## ಮೂರು ದಿಗ್ಗಜರ ಹುಟ್ಟುಹಬ್ಬ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ನಗರದ ಸಪ್ತಸ್ವರ ಸಾಂಸ್ಕೃತಿಕ ಕಲಾ ಸಂಘ (ರಿ) ಸಂಘದ ಆರ್ ಕಣ್ಣನ್ ಅಧ್ಯಕ್ಷರು ಹಾಗೂ ಮಾಜಿ ನಗರಸಭೆ ಸದಸ್ಯರಾದ ಅವರ ಅಧ್ಯಕ್ಷತೆಯಲ್ಲಿ ಏಪ್ರಿಲ್–24 ಶುಕ್ರವಾರ ರಾತ್ರಿ 8:00 ಗಂಟೆಗೆ ಪದ್ಮಭೂಷಣ,ಕರ್ನಾಟಕ ರತ್ನ ಡಾ. ರಾಜಕುಮಾರ ಅವರ 97ನೇ ಹುಟ್ಟುಹಬ್ಬದ ಜೊತೆಗೆ ಖ್ಯಾತ ಗಾಯಕಿ ಶ್ರೀಮತಿ ಎಸ್. ಜಾನಕಿಯವರ 88ನೇ ಹುಟ್ಟುಹಬ್ಬ ಹಾಗೂ ಮಾಜಿ ಕ್ರಿಕೆಟ್ ಆಟಗಾರ ಲಿಟಲ್ ಮಾಸ್ಟರ್ ಸಚಿನ್ ತೆಂಡೂಲ್ಕರ್ ರವರ ಹುಟ್ಟುಹಬ್ಬವನ್ನೂ ಈ ಎಲ್ಲ ಮಹನೀಯರ ಭಾವಚಿತ್ರಗಳಿಗೆ ಪುಷ್ಪಾರ್ಪಣೆ ಹಾಗೂ ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ಕೇಕ್ ಕತ್ತರಿಸಿ ಸಿಹಿ ಹಂಚಿದ ನಂತರ ಡಾ.ರಾಜಕುಮಾರ್ ಅವರ ಹಾಗೂ ಎಸ್.ಜಾನಕಿಯವರ ಚಿತ್ರಗೀತೆಗಳನ್ನು ಸಂಘದ ಕಲಾವಿದರು ಗಾಯನ ಮಾಡುವ ಮುಖಾಂತರ ಮಹಾನ್ ಕಲಾವಿದರನ್ನು




ಸ್ಮರಿಸಿಕೊಂಡರು. ಬಳಿಕ ಗೌರವಾಧ್ಯಕ್ಷರು ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳಿಗೆ ಸಪ್ತಸ್ವರ ಸಾಂಸ್ಕೃತಿಕ ಕಲಾ ಸಂಘದ ಸದಸ್ಯರುಗಳಿಂದ ಗೌರವ ಸನ್ಮಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ತಟ್ಟಿ, ಶಾಮಣ್ಣ ತಟ್ಟಿ ಗಂಗಾವತಿ, ವಿರೇಶ ಹಿರೇಮಠ, ವಿರೇಶ ಪಪ್ಪಿ, ಹಾಜಿ ಅಲಿಸಾಬ್, ಗೋಟೂರು ಪ್ರವೀಣ್, ಲಕ್ಕಪ್ಪ ನಾಯಕ, ಮೌನೇಶ, ಹುಸೇನ್ ಪೀರ, ರಾಮಮೂರ್ತಿ ನವಲಿ, ರಾಮಕೃಷ್ಣ.ಸಿಡಿ. ಎಂ.ಡಿ ಮುಸ್ತಫಾ, ರುಕ್ಮುದ್ದೀನ್, ಅಭಿಮಾನಿಗಳು ಭಾಗವಹಿಸಿದ್ದರು.

## ಮನುಷ್ಯ ಎಷ್ಟೇ ಸಂಪತ್ತು ಪಡೆದರೂ ತೃಪ್ತಿ ಇಲ್ಲ: ರಂಭಾಪುರಿ ಶ್ರೀ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ

ಇತ್ತೀಚಿನ ದಿನಗಳಲ್ಲಿ ಮನುಷ್ಯ ಭೌತಿಕವಾಗಿ ಸಂಪತ್ತು ಹಾಗೂ ಅಧಿಕಾರದ ಅಂತಸ್ತನ್ನು ಪಡೆದರೂ ಕೂಡ ತೃಪ್ತಿ ಸಮಾಧಾನ ಕಡಿಮೆಯಾಗುತ್ತಿದೆ ಎಂದು ಬಾಳೆ ಹೊನ್ನೂರು ಶ್ರೀ ಮದ್ ರಂಭಾಪುರಿ ಡಾ.ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಾಗತ್ಪಾದರ ವಿಷಾದ ವ್ಯಕ್ತಪಡಿಸಿದರು.

ತಾಲ್ಲೂಕಿನ ಗಿರಿಗೊಂಡನಹಳ್ಳಿ(ಸಾಲ್ಲೂರಹಳ್ಳಿ) ಗ್ರಾಮದಲ್ಲಿ ಶ್ರೀ ವಿಘ್ನೇಶ್ವರ, ಈಶ್ವರ, ಬಸವೇಶ್ವರ, ಆಂಜನೇಯ ಸ್ವಾಮಿ, ನಾಗದೇವತೆ ನೂತನ ಮೂರ್ತಿ ಪ್ರತಿಷ್ಠಾಪನೆ ದೇವಾಲಯ ಜೋಡು ಗೋಪುರಗಳ ಕಳಸಾರೋಹಣ ಕಾರ್ಯಕ್ರಮ ನಿಮಿತ್ತ ನಡೆದ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನುಡಿದರು.

ಮನುಷ್ಯನಿಗೆ ಆಸೆಗಳು ಇತಿಮಿತಿಗಳಲ್ಲಿ ಇರಬೇಕು,ದೇವರು ಇದ್ದಾನೆ ಎಂಬ ನಂಬಿಕೆಯನ್ನು ಕಳೆದುಕೊಳ್ಳಬಾರದು. ದೇವನೊಬ್ಬ ನಾಮ ಹಲವು



ಯಾವ ಹೆಸರಿನಿಂದ ಕರೆದರೂ ಪರಮಾತ್ಮ ಒಬ್ಬನೇ ಇದ್ದಾನೆ ಎನ್ನುವ ಭಾವನೆಯು ದ್ವೇಷ ಭಾವನೆ ನಾಶ ಆಗಿ ಸಾಮರಸ್ಯ ಸದ್ಭಾವನೆ ಬರುತ್ತದೆ.

ದೇವರಲ್ಲಿ ನಂಬಿಕೆ ಹಾಗೂ ಅಪನಂಬಿಕೆ ಅವಿಶ್ವಾಸ ಇರುವಂತವರನ್ನು ಕಾಣುತ್ತೇವೆ, ಭಗವಂತ ಕೊಟ್ಟಂತಹ ನೆಲ, ನೀರು, ಅನ್ನ, ಗಾಳಿಯ ಕೊಡುಗೆ ಯಾರು ಕೊಡಲು ಸಾಧ್ಯವಿಲ್ಲ, ಅಧುನಿಕ ಕಾಲದಲ್ಲಿ, ದೇವರು ಧರ್ಮ, ಜಾತಿ, ಭಾಷೆ ಹಾಗೂ ಪ್ರಾಂತೀಯ ಹೆಸರಿನಲ್ಲಿ ದುರ್ಘಟನೆಗಳು ನಡೆಯುತ್ತವೆ. ಇಂತಹ ಸಂದರ್ಭದಲ್ಲಿ ರಂಭಾಪುರಿ ಪೀಠ ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎನ್ನುವ ಸಂದೇಶಗಳನ್ನು ವೀರ ಗಂಗಾಧರ ಜಗದ್ಗುರುಗಳು ಸಾರಿದ್ದಾರೆ. ಮಾನವ ಧರ್ಮ ಉಳಿದರೆ ಮಾತ್ರ ಉಳಿದು ಬೆಳೆದುಕೊಂಡು ಬರಲು ಸಾಧ್ಯ, ಗಂಡು– ಹೆಣ್ಣು, ಬಡವ–ಶ್ರೀಮಂತ, ಬೇದ ಭಾವ ಮಾಡದೇ ಉಚ್ಚ–ನೀಚ ಸ್ವಾರ್ಥ ಸಂಕುಚಿತ ಮನೋಭಾವ ಇಲ್ಲದೇ, ಮಾನವ ಧರ್ಮದ ಎಲ್ಲಾ ಆದರ್ಶಗಳನ್ನು ವೀರಶೈವ ಧರ್ಮ ತನ್ನ ಒಡಲಿನಲ್ಲಟ್ಟುಕೊಂಡು ಧಾರ್ಮಿಕ ಜಾಗೃತಿ ಜೊತೆಗೆ ಸಾಮಾಜಿಕ ಸತ್ಕ್ರಾಂತಿ ಮಾಡಿ ಎಲ್ಲರನ್ನೂ ಕರೆತರುವ ಪ್ರಯತ್ನ ರಂಭಾಪುರಿ ಪೀಠ ಮಾಡುತ್ತಿದೆ ಎಂದರು.

"ಹುಟ್ಟು ಎಷ್ಟು ಸಹಜವೋ ಸಾವು ಕೂಡ ನಿಶ್ಚಿತವಾದದ್ದು" ಜೀವನವೆಂಬುದು ತೆರೆದಿಟ್ಟ ಪುಸ್ತಕ ಇದ್ದ ಹಾಗೆ ಮೊದಲನೆ ಪುಟ ಕೊನೆಯ ಪುಟ ಭಗವಂತ ಬರೆದು ಕೊಟ್ಟಿರುತ್ತಾನೆ. ಹುಟ್ಟು ಸಾವಿನ ಮಧ್ಯೆ ಬಾಳಿನ ಪುಟಗಳನ್ನು ಸುಂದರವಾಗಿ ಬರೆದುಕೊಳ್ಳುವುದು ಅವರವರೇ ಆದ್ದರಿಂದ ಪ್ರತಿಯೊಬ್ಬರೂ ಧರ್ಮಾಚರಣೆಯಲ್ಲಿ ತೊಡಗಿಕೊಳ್ಳಬೇಕು ಸಮಾಜಕ್ಕೆ ಒಳ್ಳೆಯ ಕಾರ್ಯಗಳನ್ನು ಮಾಡಿ ಎಂದರು.

# ಪ್ರಾಣಿ ದಯೆ ಕೇವಲ ಮಾತಲ್ಲ, ಪ್ರಾಣಿ ಹಿಂಸೆಗೆ ಕಾನೂನಿದೆ..!




**ಮಾನವೀಯತೆ ಮತ್ತು ಕಾನೂನಿನ ಚೌಕಟ್ಟು**

ನಮ್ಮ ಸುತ್ತಮುತ್ತ ಕಾಣಸಿಗುವ ಬೀದಿ ನಾಯಿಗಳು, ಬಿಡಾಡಿ ದನಗಳು ಕೇವಲ ಪ್ರಾಣಿಗಳಲ್ಲ, ಅವು ನಮ್ಮ ಪರಿಸರದ ಒಂದು ಅವಿಭಾಜ್ಯ ಅಂಗ. ಆದರೆ ಇತ್ತೀಚಿನ ದಿನಗಳಲ್ಲಿ ಇವುಗಳ ಮೇಲೆ ನಡೆಯುತ್ತಿರುವ ಹಲ್ಲೆಗಳು, ವಿಷ ಹಾಕುವುದು ಮತ್ತು ಹಿಂಸಾತ್ಮಕ ವರ್ತನೆಗಳು ಹೆಚ್ಚುತ್ತಿವೆ. ಇದು ಕೇವಲ ಪ್ರಾಣಿ ಹಿಂಸೆಯಷ್ಟೇ ಅಲ್ಲ, ನಮ್ಮ ಸಮಾಜದ ನೈತಿಕ ಅಧಃಪತನದ ಸಂಕೇತವೂ ಹೌದು.

ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಮನುಷ್ಯರಷ್ಟೇ ಸಮಾನವಾಗಿ ಬದುಕುವ ಹಕ್ಕು ಪ್ರಾಣಿಗಳಿಗೂ ಇದೆ. ಆದರೆ, ಇತ್ತೀಚಿನ ದಿನಗಳಲ್ಲಿ ಬೀದಿ ನಾಯಿಗಳ ಮೇಲೆ ಮತ್ತು ಇತರ ಪ್ರಾಣಿಗಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ನಾಗರಿಕ ಸಮಾಜಕ್ಕೆ ಕಳಂಕಪ್ರಾಯವಾಗಿವೆ. ಹೌದು ಪ್ರಾಣಿಗಳನ್ನು ಹೊಡೆಯುವುದು, ವಿಷ ಹಾಕುವುದು ಅಥವಾ ಅವುಗಳನ್ನು ಕ್ರೂರವಾಗಿ ಕೊಲ್ಲುವುದು ಕೇವಲ ಅಮಾನವೀಯ ಕೃತ್ಯವಲ್ಲ, ಅದು ಕಾನೂನುಬದ್ಧ ಅಪರಾಧವೂ ಹೌದು.

ಪ್ರಾಣಿಗಳ ಮೇಲಿನ ದೌರ್ಜನ್ಯದ ಸ್ವರೂಪ ಬೀದಿ ನಾಯಿಗಳಿಗೆ ಮನೆ ಮುಂದೆ ನೆರಳಿಗೆ ಕುಳಿತುಕೊಳ್ಳಲು ಬಿಡದೆ ಬೀದಿ ನಾಯಿಗಳಿಗೆ ಹೊಡೆಯುವುದು ಅವುಗಳಿಗೆ ಆಹಾರ ನೀಡುವವರ ಮೇಲೆ ಹಲ್ಲೆ ಮಾಡುವುದು, ನಾಯಿಗಳಿಗೆ ಕಲ್ಲು ಹೊಡೆಯುವುದು, ವಾಹನಗಳಿಂದ ಬೇಕೆಂದೇ ಗುದ್ದುವುದು ಮತ್ತು ಅವುಗಳ ವಾಸಸ್ಥಳವನ್ನು ಧ್ವಂಸ ಮಾಡುವುದು ದೌರ್ಜನ್ಯದ ವಿವಿಧ ರೂಪಗಳಾಗಿವೆ. ಅನೇಕರು ಬೀದಿ ನಾಯಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂಬ ಕಾರಣಕ್ಕೆ ಅವುಗಳನ್ನು ಹಿಂಸಿಸುತ್ತಾರೆ, ಆದರೆ ಹಿಂಸೆ ಎಂದಿಗೂ ಪರಿಹಾರವಲ್ಲ ಎಂಬುದು ನೆನಪಿರಲಿ..

**ಭಾರತೀಯ ಕಾನೂನು ಏನು ಹೇಳುತ್ತದೆ**

ಭಾರತದಲ್ಲಿ ಪ್ರಾಣಿಗಳ ಹಿತರಕ್ಷಣೆಗಾಗಿ ಬಲಿಷ್ಠವಾದ ಕಾನೂನುಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ,

**ಪ್ರಾಣಿ ಹಿಂಸೆ ತಡೆ ಕಾಯ್ದೆ, 1960 (PCA Act):** ಈ ಕಾಯ್ದೆಯು ಪ್ರಾಣಿಗಳಿಗೆ ಅನಗತ್ಯ ನೋವು ಅಥವಾ ಸಂಕಟ ಉಂಟುಮಾಡುವುದನ್ನು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸುತ್ತದೆ.

**ಭಾರತೀಯ ನ್ಯಾಯ ಸಂಹಿತೆ (BNS):** ಪ್ರಾಣಿಗಳನ್ನು ಕೊಲ್ಲುವುದು, ವಿಷ ಹಾಕುವುದು ಅಥವಾ ಅಂಗವಿಕಲಗೊಳಿಸುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಇದಕ್ಕೆ ದಂಡ ಮತ್ತು ಜೈಲು ಶಿಕ್ಷೆಯೂ ಇದೆ.

**ಸಂವಿಧಾನದ 51A(g) ವಿಧಿ:** ಪ್ರತಿಯೊಬ್ಬ ಭಾರತೀಯ ನಾಗರಿಕನು ಕಾಡುಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳೂ ಸೇರಿದಂತೆ ನೈಸರ್ಗಿಕ ಪರಿಸರವನ್ನು ರಕ್ಷಿಸುವುದು ಮತ್ತು ಪ್ರಾಣಿಗಳ ಬಗ್ಗೆ ದಯೆ ತೋರುವುದು ಮೂಲಭೂತ ಕರ್ತವ್ಯವಾಗಿದೆ.

**ಸುಪ್ರೀಂ ಕೋರ್ಟ್ ಆದೇಶ**



ಬೀದಿ ನಾಯಿಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸ್ಥಳಾಂತರಿಸುವಂತಿಲ್ಲ. ಅವುಗಳನ್ನು ಹಿಡಿದು ಸಂತಾನಶಕ್ತಿ ಹರಣ ಚಿಕಿತ್ಸೆ (ABC - Animal Birth Control) ಮಾಡಿಸಿ, ಅದೇ ಜಾಗಕ್ಕೆ ಬಿಡಬೇಕು ಎಂಬುದು ನಿಯಮ.

**ಪರಿಹಾರದ ಹಾದಿ ಯಾವುದು?**

ಬೀದಿ ನಾಯಿಗಳ ಸಮಸ್ಯೆ ಮತ್ತು ಸಾರ್ವಜನಿಕರ ಸುರಕ್ಷತೆಯ ನಡುವೆ ಸಮತೋಲನ ಕಾಯ್ದುಕೊಳ್ಳಲು ಈ ಕೆಳಗಿನ ಕ್ರಮಗಳು ಅಗತ್ಯ.

**ಸಂತಾನಶಕ್ತಿ ಹರಣ ಚಿಕಿತ್ಸೆ (Sterilization):** ಸ್ಥಳೀಯ ಸಂಸ್ಥೆಗಳ ಮೂಲಕ ನಾಯಿಗಳ ಸಂತಾನೋತ್ಪತ್ತಿಯನ್ನು ನಿಯಂತ್ರಿಸುವುದು ವೈಜ್ಞಾನಿಕ ಮಾರ್ಗವಾಗಿದ್ದು, ಲಸಿಕೆ ನೀಡುವುದು ಅತ್ಯವಶ್ಯಕವಾಗಿದೆ (Vaccination): ರೇಬೀಸ್‌ನಂತಹ ಕಾಯಿಲೆಗಳು ಹರಡದಂತೆ ನಾಯಿಗಳಿಗೆ ಸರಿಯಾದ ಸಮಯಕ್ಕೆ ಲಸಿಕೆ ಹಾಕಿಸಬೇಕು.

**ಪ್ರಾಣಿ ಪಕ್ಷಿಗಳ ಜೊತೆ ಸಹಬಾಳ್ವೆ ಅನಿವಾರ್ಯ ಮತ್ತು ಅವಶ್ಯಕ:** ಪ್ರಾಣಿಗಳಿಗೆ ಸಣ್ಣ ಪ್ರಮಾಣದ ಆಹಾರ ಮತ್ತು ನೀರು ನೀಡುವುದರಿಂದ ಅವುಗಳ ಸ್ವಭಾವ ಶಾಂತವಾಗಿರುತ್ತದೆ. ಹಸಿದ ಪ್ರಾಣಿಗಳು ಹೆಚ್ಚು ಆಕ್ರಮಣಕಾರಿಯಾಗುತ್ತವೆ ಎಂಬುದನ್ನು ನಾವು ಮರೆಯಬಾರದು.

**ಪ್ರಾಣಿಗಳ ಮೇಲೆ ದೌರ್ಜನ್ಯ ಕಂಡಾಗ ಏನು ಮಾಡಬೇಕು.?**

ಒಂದು ವೇಳೆ ನಿಮ್ಮ ಕಣ್ಣ ಮುಂದೆ ಪ್ರಾಣಿಗಳ ಮೇಲೆ ದೌರ್ಜನ್ಯ ನಡೆಯುತ್ತಿದ್ದರೆ,

- ತಕ್ಷಣವೇ ಹತ್ತಿರದ ಪೊಲೀಸ್ ಠಾಣೆಗೆ ದೂರು ನೀಡಿ.
- ಸ್ಥಳೀಯ ಪ್ರಾಣಿ ಕಲ್ಯಾಣ ಸಂಸ್ಥೆಗಳನ್ನು (NGOs) ಸಂಪರ್ಕಿಸಿ.
- ಸಾಕ್ಷ್ಯಕ್ಕಾಗಿ ಫೋಟೋ ಅಥವಾ ವಿಡಿಯೋಗಳನ್ನು ಚಿತ್ರಿಸಿ ಕೊಳ್ಳುವುದು ಒಳ್ಳೆಯದು ಮತ್ತು ಅನಿವಾರ್ಯ...

ಒಟ್ಟಾರೆಯಾಗಿ, ಗಾಂಧೀಜಿಯವರು ಹೇಳಿದಂತೆ, "ಒಂದು ದೇಶದ ಶ್ರೇಷ್ಠತೆ ಮತ್ತು ಅದರ ನೈತಿಕ ಪ್ರಗತಿಯನ್ನು ಅಲ್ಲಿನ ಪ್ರಾಣಿಗಳನ್ನು ಹೇಗೆ ನಡೆಸಿಕೊಳ್ಳಲಾಗುತ್ತದೆ ಎಂಬುದರ ಮೂಲಕ ಅಳೆಯಬಹುದು." ಮೂಕಪ್ರಾಣಿಗಳ ಪರವಾಗಿ ಧ್ವನಿ ಎತ್ತುವುದು ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕನ ಕರ್ತವ್ಯ ದಯೆಯೇ ಧರ್ಮದ ಮೂಲವಯ್ಯ ಎಂಬ ವಚನವನ್ನು ಮರೆಯದಿರಿ...!

ಮಾನವೀಯತೆಯಿಂದ ಅವುಗಳನ್ನು ಸಾಕುವುದು, ಸಾಕಲಾಗದಿದ್ದರು ಒಂದಷ್ಟು ಆಹಾರ, ನೀರು, ಮನೆಯ ಮುಂದೆ ಅಂಗಳದಲ್ಲಿ ಅಥವಾ ನಿಮ್ಮ ಅಂಗಡಿಗಳ ಮುಂದೆ ಮಲಗಲು ಒಂದಿಷ್ಟು ಜಾಗ ನೀಡಿದರೆ ಸಾಕು. ನಾವು ಪ್ರಾಣಿಗಳ ಮೇಲೆ ತೋರುವ ಒಂದು ಸಣ್ಣ ಪ್ರೀತಿ, ಸುಂದರ ಮತ್ತು ಶಾಂತಿಯುತ ಸಮಾಜದ ನಿರ್ಮಾಣಕ್ಕೆ ದಾರಿಯಾಗುತ್ತದೆ.

ನಮ್ಮಂತೆಯೇ ಅವಕ್ಕೂ ನೋವಾಗುತ್ತದೆ, ಹಸಿವಾಗುತ್ತದೆ ಎಂಬುದು ನೆನಪಿರಲಿ. ಅವುಗಳ ಮೌನ ಆಕ್ರಂದನಕ್ಕೆ ನಾವು ಸ್ಪಂದಿಸೋಣ. ಅವುಗಳ ಆರೋಗ್ಯಕ್ಕೆ ಸಂಬಂಧಿಸಿದಂತೆ ನಿಮ್ಮ ಸುತ್ತಮುತ್ತಲಿನ ಸ್ವಯಂಸೇವಾ ಸಂಸ್ಥೆಗಳ (NGO) ಸಹಾಯ ಪಡೆಯಲು ಮರೆಯಬೇಡಿ...

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927 (RNINO:KARKAN/2011/48371)